REPORT RESUMES

ED 010 345 48
READING MATERIAL IN KANNADA, SECTION III.
BY- KRISHNAMURTHI, M.G. MCCORMACK W.
UNIVERSITY OF WISCONSIN, MADISON
REPORT NUMBER NDEA-VI-266-3 PUB DATE 64
EDRS PRICE MF-$0.27 HC-$6.16 154P.

DESCRIPTORS- *KANNADA, *LANGUAGE GUIDES, *LANGUAGES, *READING MATERIALS, MADISON, WISCONSIN

THIS PUBLICATION IS THE THIRD OF A THREE-VOLUME SERIES (ED 010 343 TO ED 010 345) COVERING A VARIETY OF READING MATERIALS IN KANNADA, A PRINCIPAL LANGUAGE OF THE MYSORE STATE IN INDIA. INCLUDED IN VOLUME 3 ARE (1) BIOGRAPHIES OF MODERN KANNADA WRITERS AND LITERATURE SELECTIONS, (2) CLASSICAL POETRY IN MODERN KANNADA TRANSLATION, (3) SOME KANNADA PROVERBS WITH THEIR ENGLISH EQUIVALENTS, AND (4) SELECTIONS FROM FOLK POETRY. THE MATERIAL IS PRESENTED IN THE KANNADA LANGUAGE. (JH)

266-3

Reading Material in Kannada,

Section III

pp 527-676	(a)	Classical poetry in Modern Kannada translation
	(b)	Biographies of Modern Kannada writers and selections from Modern Kannada literature
	(c)	Vacanas and their English translation
	(d)	Some Kannada proverbs with their English equivalents
	(e)	Selections from folk-poetry

ಪಂಪನ ವಿಕ್ರಮಾರ್ಜುನ ವಿಜಯದ ಆಧಾರದ ಮೇಲೆ.

ಕರ್ಣನ ಸಾವು

[ಭೀಷ್ಮಾಚಾರ್ಯರ ನಂತರ ಯಾರು ಸೇನಾಧಿಪತಿಯಾಗಬೇಕು ಎಂಬ ಮಾತು ಬರುತ್ತದೆ. ದುರ್ಯೋಧನ ಕರ್ಣನಿಗೆ ಸೇನಾಧಿಪತ್ಯವನ್ನು ಕೊಡಬೇಕು ಎನ್ನುತ್ತಾನೆ. ಆದರೆ ಕರ್ಣ ದ್ರೋಣಾಚಾರ್ಯರು ಸೇನಾಧಿಪತಿಗಳಾಗಲಿ, ನಾನು ಅವರಿಗೆ ಸಹಾಯ ಮಾಡುತ್ತೇನೆ ಎನ್ನುತ್ತಾನೆ. ದ್ರೋಣಾಚಾರ್ಯರು ಸತ್ತ ಮೇಲೆ ಕರ್ಣ ಸೇನಾಧಿಪತಿಯಾಗುತ್ತಾನೆ.]

ಕರ್ಣ ಬ್ರಾಹ್ಮಣರಿಗೆ ದಾನಗಳನ್ನು ಕೊಟ್ಟು, ಸಿಡಿಲನ ನೆಂಟರಾಗಿದ್ದ ಕೈದುಗಳನ್ನು ಹಿಡಿದು, ಮಾಸಲು ಬಣ್ಣದ ಕುದುರೆಗಳನ್ನು ಕಟ್ಟಿದ ತೇರಿನ

ಮೇಲೆ ತುಳ್ಳಿತು ಬಾಣದ ಹಾಸಿಗೆಯ ಮೇಲೆ ಮಲಗಿದ್ದ ಭೀಷ್ಮನ ಹತ್ತಿರ ಬಂದನು. ಅವರನ್ನು ಮೂರು ಸಲ ಸುತ್ತಿ ಬಂದು ಅವರ ಕಾಲುಗಳ ಮೇಲೆ ತನ್ನ ತಲೆಯನ್ನು ಇಟ್ಟು ಈ ರೀತಿ ಹೇಳಿದನು:

" ಆಡುವ ಮಾತಿನ ಅರ್ಥ ತಿಳಿಯದೆ, ಸಿಟ್ಟಿನಿಂದ ನಿಮ್ಮ ಮನಸ್ಸನ್ನು ನೋಯಿಸಿದೆ, ನಿಮ್ಮನ್ನು ನಿಂದಿಸಿದೆ. ಅದನ್ನು ದಯವಿಟ್ಟು ಮರೆಯಿರಿ ಎಂದು ನಿಮ್ಮನ್ನು ಬೇಡಲು ನಾನು ಬಂದಿದ್ದೇನೆ. ಯುದ್ಧದಲ್ಲಿ ನಿಮ್ಮಂಥವರು ಕೂಡ ಗೆಲಲಾರದ ಪಾಂಡವರನ್ನು ನನ್ನಂಥವರು ಗೆಲ್ಲುವುದು ಆಶ್ಚರ್ಯದ ಮಾತು. ಗೆದ್ದರೂ ಸರಿ, ಸೋತರೂ ಸರಿ, ಯುದ್ಧಮಾಡಿ ಅರ್ಜುನನನೆ ಜೊತೆಗೆ ನನ್ನ ಛಲವನ್ನು ಮೆರೆಯುತ್ತೇನೆ."

ಆಗ ಭೀಷ್ಮ ಹೇಳಿದ:

"ಹಿಂದೆ ನೀನು ಸ್ವಾಮಿ ಭಕ್ತಿಯಿಂದ ಮಾತಾಡಿದೆ. ಬೇರೆ ಯಾವ ಕಾರಣದಿಂದಲ್ಲ. ನನ್ನ ಬಲ ದಂಡವಾಗಬಾರದು, ನಾನು ಸರದಿಗಾಗಿ ಕಾಯುವುದಿಲ್ಲ ಎಂದು ನೀನು ಹೇಳಿದುದು ತಪ್ಪಲ್ಲ. ಪರಶುರಾಮರು ನಮ್ಮಿಬ್ಬರ ಉಪಾಧ್ಯಾಯರು. ಆದ್ದರಿಂದ ನಾವಿಬ್ಬರೂ ನೆಂಟರು.

ಅದೂ ಅಲ್ಲದೆ ನೀನು ನನಗೆ ಕುಂತಿಯ ಮಕ್ಕಳಂತೆ ಮೊಮ್ಮಗ ಎಂದು ತಿಳಿದಿದ್ದೇನೆ. ನಿನ್ನನ್ನು ನೆಚ್ಚಿರುವ ದುರ್ಯೋಧನನ ಆಸೆಗಳು ಕಡಿಮೆಯಾಗುವಂತೆ ಶಲ್ಯನನ್ನು ಸಾರಥಿಯಾಗಿ ಮಾಡಿಕೊಂಡು ಕಾದು."

ಈ ಮಾತನ್ನು ಕೇಳಿ ಕರ್ಣನು ಹೇಳಿದನು:

"ಉತ್ತಮ ಕುಲದ ಶಲ್ಯ ನನ್ನ ತೇರನ್ನು ನಡೆಸುತ್ತಾನೆಯೇ? ಈಗಾಗಲೇ ನನಗೆ ವಿನಯವಿಲ್ಲದ ದುಡುಕು ಸ್ವಭಾವದವನು ಎಂಬ ನಿಂದೆ ಬಂದಿಲ್ಲವೇ?"

ಕರ್ಣನು ಹೀಗೆ ಹೇಳಲು ಭೀಷ್ಮನು ಅವನ ವಿನಯದ, ವಿವೇಕದ ಮಾತುಗಳನ್ನು ಮೆಚ್ಚಿ, ಇವನು ಕುಲಹೀನನಲ್ಲ, ತಾಯಿಯ ಮತ್ತು ತಂದೆಯ ಕಡೆ ಶುದ್ಧ ಕುಲದವನಾಗಿರುವ ವೀರನು ಎಂದು ಹೇಳಿದನು. ನೀನು ನನಗೆ ಸಮಾಧಾನ ಕೊಡಬೇಕಾದರೆ, ದುರ್ಯೋಧನನ ರಾಜ್ಯವನ್ನು ಪ್ರೀತಿಸುವುದಾದರೆ ಶಲ್ಯನನ್ನೇ ಸಾರಥಿಯನ್ನಾಗಿ ಮಾಡಿಕೊಂಡು ಕಾದು

ಎಂದು ಹೇಳಿದನು. ಆವೇಳೆ ಕರ್ಣನು ಯುದ್ಧಭೂಮಿಗೆ ಹೋಗಿ ಸಿದ್ಧತೆಗಳನ್ನು ಮಾಡಿಕೊಂಡನು.

C. ಯುದ್ಧಕ್ಕೆ ಮುಂಚೆ ಕುಂತಿ ಕರ್ಣನನ್ನು ನನ್ನ ಮಕ್ಕಳನ್ನು ಕೊಲ್ಲಬೇಡ ಎಂದು ಬೇಡುತ್ತಾಳೆ. ಕರ್ಣ ನಾನು ಒಂದು ಸಲ ಉಪಯೋಗಿಸಿದ ಅಸ್ತ್ರವನ್ನು ಇನ್ನೊಂದು ಸಲ ಉಪಯೋಗಿಸುವುದಿಲ್ಲ. ಅರ್ಜುನನನ್ನು ಬಿಟ್ಟು ಬೇರೆ ಯಾವ ಪಾಂಡವರನ್ನೂ ಕೊಲ್ಲುವುದಿಲ್ಲ ಎಂದು ಮಾತು ಕೊಡುತ್ತಾನೆ. ಶಲ್ಯ ಕರ್ಣನಿಗೆ ಬಾಣವನ್ನು ಅರ್ಜುನನ ಎದೆಗೆ ಗುರಿಯಿಟ್ಟು ಹೊಡೆ ಎಂದು ಹೇಳುತ್ತಾನೆ.

ಆದರೆ ಕರ್ಣ ಆಗಲೇ ಅರ್ಜುನನ ತಲೆಗೆ ಗುರಿಯಿಟ್ಟಿದ್ದ. ಆದ್ದರಿಂದ ಬಾಣವನ್ನು ಬಿಟ್ಟ. ಕೃಷ್ಣ ಅರ್ಜುನನ ರಥವನ್ನು ಕೆಲವು ಅಂಗುಲ ಕೆಳಕ್ಕೆ ತಳ್ಳುತ್ತಾನೆ. ಕರ್ಣನ ಬಾಣ ಅರ್ಜುನನ ಕಿರೀಟಕ್ಕೆ ತಾಗುತ್ತದೆ. ಕಿರೀಟ ಕೆಳಕ್ಕೆ ಬೀಳುತ್ತದೆ. ಅರ್ಜುನನಿಗೆ ಪೆಟ್ಟಾಗುವುದಿಲ್ಲ. ತನ್ನ ಮಾತು ಕೇಳಲಿಲ್ಲ ಎಂದು ಶಲ್ಯನಿಗೆ ಸಿಟ್ಟು ಬಂದು ರಥದಿಂದ ಇಳಿದು ಹೋಗುತ್ತಾನೆ. ಕರ್ಣನಿಗೆ ಸಾರಥಿ ಇಲ್ಲವಾಗುತ್ತದೆ.]

ತನ್ನ ರಥವನ್ನು ತಾನೇ ನಡೆಸುತ್ತ ಯುದ್ಧ ಮಾಡುತ್ತಿರುವಾಗ ಕರ್ಣನ ರಥದ ಗಾಲಿಗಳು

ಕೆಸರಿನಲ್ಲಿ ಸಿಕ್ಕಿ ಹಾಕಿಕೊಂಡುವು.

ಆಗ ಕೃಷ್ಣ ಅರ್ಜುನನಿಗೆ ಈಗ ಕರ್ಣ ಕೆಳಗಿಳಿದು ಗಾಲಿಗಳನ್ನು ಎತ್ತುತ್ತಾನೆ. ನೀನು ಬಾಣ ಬಿಟ್ಟು ಅವನನ್ನು ಕೊಲ್ಲು, ಇಲ್ಲದಿದ್ದರೆ ನಿನಗೆ ಅವನನ್ನು ಸೋಲಿಸಲು ಆಗುವುದಿಲ್ಲ ಎಂದು ಹೇಳಿದನು.

ಅರ್ಜುನ ಸಿಟ್ಟಿನಿಂದ ಈಗ ಕರ್ಣನಿಗೆ ಸಾರಥಿಯಿಲ್ಲ, ಮೈಗೆ ರಕ್ಷೆಯಿಲ್ಲ. ಈಗ ಅವನ ಜೊತೆ ಯುದ್ಧ ಮಾಡು ಎಂದು ನೀನು ಏಕೆ ಹೇಳುತ್ತೀ ನನಗೆ ತಿಳಿಯುವುದಿಲ್ಲ ಎಂದನು.

ಆಗ ಕೃಷ್ಣನು ಹೇಳಿದನು:

ಕರ್ಣ ನಿನ್ನ ಮಗ ಅಭಿಮನ್ಯುವನ್ನು ಇರಿದು

ಕೊಂದನು. ನೀನು ಅವನ ಜೊತೆ ಯುದ್ಧ ಮಾಡದಿದ್ದರೆ ನಾನು ಅವನನ್ನು ಕೊಲ್ಲುತ್ತೇನೆ.

ಅಷ್ಟು ಹೊತ್ತಿಗೆ ಕರ್ಣ ಕೆಸರಿನ ಗಾಲಿಗಳನ್ನು ಮೇಲಕ್ಕೆತ್ತಿ ಕೆಸರಿನೊಳಗೆ ಕುಳಿತನು. ಹೊಳೆಯುವ ದೀಪಗಳು ಬೆಳಕು ಆ ದೀಪ ಆರಿ ಹೋಗುವುದಕ್ಕೆ ಮುಂಚೆ ಹೆಚ್ಚಾಗಿ ಹೊಳೆಯುವಂತೆ ಕರ್ಣನ ತೇಜಸ್ಸು ಅವನ ಕೊನೆಗಾಲದಲ್ಲಿ ಹೊಳೆಯಿತು.

ಅರ್ಜುನನು ಶೌರಿ ಕೊಟ್ಟ ಅಸ್ತ್ರವನ್ನು ಬಿಲ್ಲಿಗೆ ಹೂಡಿ ಬಿಟ್ಟನು. ಆಗ ಭೂಮಿ ನಡುಗಿತು. ಕರ್ಣನ ತಲೆ ಕೆಳಕ್ಕೆ ಬಿತ್ತು. ಶೌರ್ಯಕ್ಕೆ, ಸತ್ಯಕ್ಕೆ, ಕಲಿತನಕ್ಕೆ ಮನೆಯಂತಿದ್ದ ಕರ್ಣನ ಕೊನೆಯಾಯಿತು.

ಆಗ ಮಿಂಚಿನಂತೆ ಹೊಳೆಯುತ್ತಿದ್ದ ತೇಜವನ್ನು
ಕರ್ಣನ ದೇಹದಿಂದ ಹೊರಟು ಸೂರ್ಯನಲ್ಲಿ ಸೇರಿತು.

ಅಸ್ತ್ರ, ಬಾಣ	Arrow
ಅಂಗುಲ	Inch
ಆರಿ ಹೋಗು	Extinguish
ಎದೆ	Chest
ಇರಿ	Stab
ಕುಲ ಹೀನ	Caste-less
ಕೈದು	Weapon
ಗಾಲ	Wheel
ಗೆಲಲಾಗದ	Cannot be won
ಗುರಿ	Aim
ತಾಗು	Strike
ತಳ್ಳು	Push
ತೇಜಸ್ಸು	Brightness
ದಂಡ	Waste
ದುಡುಕು	Haste
ಪೆಟ್ಟು	Hurt

ನಡುಗು	Tremble
ನಿಂದೆ	Abuse
ನಿಂದಿಸು	To abuse
ನೆಚ್ಚು	Trust
ಮಾಸಲು	Faded (brownish)
ಮಿಂಚು	Lightning
ರಕ್ಷೆ	Protection
ವಿನಂತು	Politeness
ವಿವೇಕ	Wisdom
ಶುದ್ಧ ಕುಲ	Pure caste
ಸಮಾಧಾನ	Consolation
ಸಾರಥಿ	Driver of chariot
ಸಿಕ್ಕಿಹಾಕಿಕೊ	Get stuck
ಸಿದ್ಧತೆ	Preparation
ಹೂಡು	To Set
ಹೊಳೆ	Shine

ರನ್ನ

ರನ್ನ ಕ್ರಿ.ಶ. 949 ರಲ್ಲಿ ಉತ್ತರ ಕರ್ನಾಟಕದಲ್ಲಿರುವ ಮುದುವೊಳಲಿನಲ್ಲಿ ಹುಟ್ಟಿದನು. ಆ ಊರಿಗೆ ಈಗ ಮುಧೋಳವೆಂದು ಹೆಸರು. ರನ್ನನದು ಬಳೆಗಾರರ ಮನೆತನ. ಅವನ ಧರ್ಮ ಜೈನ ಧರ್ಮ.

ರನ್ನನ ಮೊದಲನೆಯ ಕೃತಿ ಪರಶುರಾಮ ಚರಿತ. ಅದನ್ನು ಬರೆದಾಗ ರನ್ನ ಚಿಕ್ಕ ಸಾಮಂತರಾಜನ ಆಸ್ಥಾನದಲ್ಲಿದ್ದ. ಕೆಲವು ವರ್ಷಗಳಾದ ಮೇಲೆ ಪಶ್ಚಿಮ ಚಾಳುಕ್ಯ ರಾಜನಾದ ಆಹವಮಲ್ಲ ತೈಲಪನ ಆಸ್ಥಾನಕ್ಕೆ ಹೋದನು. ತೈಲಪ ಅವನಿಗೆ ಕವಿಚಕ್ರವರ್ತಿ ಎಂಬ ಬಿರುದನ್ನು ಕೊಟ್ಟ. 993ರ ಸುಮಾರಿಗೆ ರನ್ನ ಅಜಿತ ಪುರಾಣ ಎಂಬ ಜೈನ ಪುರಾಣವನ್ನು

ಬರೆದ.

ರನ್ನನ ಬೇರೆ ಎಲ್ಲ ಗ್ರಂಥಗಳಿಗಿಂತ ಸಾಹಸಭೀಮವಿಜಯ ಹೆಚ್ಚು ಹೆಸರುವಾಸಿಯಾಗಿದೆ. ಅದನ್ನು ಬರೆದ ಕಾಲ ಸರಿಯಾಗಿ ಗೊತ್ತಿಲ್ಲ. ಈ ಗ್ರಂಥದ ನಾಯಕ ತೈಲಪನ ಮಗ ಇರಿವಬೆಡಂಗ ಸತ್ಯಾಶ್ರಯ. ಸತ್ಯಾಶ್ರಯ 997 ರಿಂದ 1008ರ ವರೆಗೆ ಆಳಿದ್ದುದರಿಂದ ಈ ಗ್ರಂಥವನ್ನು ರನ್ನ 1007 ರ ಬರೆದಿರಬಹುದು ಎಂದು ಕೆಲವು ಪಂಡಿತರು ಹೇಳುತ್ತಾರೆ.

ಸಾಹಸಭೀಮವಿಜಯದ ಕಥಾವಸ್ತು, ಮಹಾಭಾರತ ಯುದ್ಧದ ಹದಿನೆಂಟನೆಯ ದಿನ ಮಧ್ಯಾಹ್ನ ನಡೆದ ಗದಾಯುದ್ಧ. ಅಲ್ಲಿಯವರೆಗೆ

ನಡೆದ ಕತೆಯನ್ನೆಲ್ಲ ತನ್ನ ಪಾತ್ರಗಳ ನೆನವಿನ ರೂಪದಲ್ಲಿ ಹೇಳುತ್ತಾನೆ. ತನ್ನ ರಾಜನಾದ ಸತ್ಯಾಶ್ರಯನನ್ನು ಭೀಮನಿಗೆ ಹೋಲಿಸುತ್ತಾನೆ.

ಪಂಪನ ಭಾರತಕ್ಕೂ ರನ್ನನ ಸಾಹಸಭೀಮವಿಜಯಕ್ಕೂ ಒಂದು ಮುಖ್ಯ ಸಾಮ್ಯವಿದೆ. ಪಂಪ ಭಾರತದ ನಾಯಕ ಅರ್ಜುನನಾದರೂ ಕರ್ಣನ ಪಾತ್ರಕ್ಕೆ ಪಂಪ ಹೆಚ್ಚು ಗಮನ ಕೊಟ್ಟಿದ್ದಾನೆ. ಅದೇ ರೀತಿ ರನ್ನ ತನ್ನ ಕಾವ್ಯದ ನಾಯಕ ಭೀಮನಾದರೂ ದುರ್ಯೋಧನನ ಪಾತ್ರಕ್ಕೆ ಹೆಚ್ಚು ಗಮನ ಕೊಟ್ಟಿದ್ದಾನೆ. ಸಂಸ್ಕೃತ ಭಾರತದಲ್ಲಿ ದುರ್ಯೋಧನನ ಕೆಟ್ಟ ಗುಣಗಳಿಗೆ ಹೆಚ್ಚು ಗಮನ ಕೊಟ್ಟಿದ್ದರೂ ರನ್ನ ದುರ್ಯೋಧನನ ಒಳ್ಳೆಯ

ಗುಣಗಳಿಗೆ ಗಮನ ಕೊಟ್ಟಿದ್ದಾನೆ.

ಸಾಹಸಭೀಮವಿಜಯದಲ್ಲಿ ಕೆಲವು

ನಾಟಕೀಯ ಗುಣಗಳಿವೆ. ಕಾವ್ಯದ ಸಂಭಾಷಣೆ ನಾಟಕಗಳ ಸಂಭಾಷಣೆಯಂತೆ ಹಾಗೆ ಉಚಿತವಾಗಿದೆ. ಈ ಗ್ರಂಥವನ್ನು ಶ್ರೀ. ಬಿ.ಎಂ. ಶ್ರೀಕಂಠಯ್ಯನವರು ನಾಟಕವಾಗ ರೂಪಾಂತರಿಸಿದ್ದಾರೆ.

ನಾಟಕೀಯ	Dramatic
ಬಳೆಗಾರ	Bangle seller
ರೂಪಾಂತರಿಸು	Adapt
ಸಾಮ್ಯ	Similarity
ಸಂಭಾಷಣೆ	Dialogue
ಹರಿತ	Sharp

542

ಸಾಹಸ ಭೀಮ ವಿಜಯ ರನ್ನ

ಗದಾಯುದ್ಧ

[ಮಹಾಭಾರತದ ಯುದ್ಧದಲ್ಲಿ ಅನೇಕ ವೀರರು ಸಾಯುತ್ತಾರೆ. ದ್ರೋಣ, ಕೃಪ, ಕರ್ಣ, ತನ್ನ ತಮ್ಮಂದಿರು ಎಲ್ಲ ಸತ್ತ ಮೇಲೆ ದುರ್ಯೋಧನ ಯುದ್ಧಭೂಮಿಯಲ್ಲಿ ಬಾಣದ ಹಾಸಿಗೆಯ ಮೇಲೆ ಮಲಗಿದ್ದ ಭೀಷ್ಮನ ಹತ್ತಿರಕ್ಕೆ ಹೋಗುತ್ತಾನೆ. ಭೀಷ್ಮ ದುರ್ಯೋಧನನಿಗೆ ಈಗಲಾದರೂ ಪಾಂಡವರ ಜೊತೆ ಸಂಧಿ ಮಾಡಿಕೋ ಎಂದು ಹೇಳುತ್ತಾನೆ. ಆದರೆ ದುರ್ಯೋಧನ ನನ್ನ ತಮ್ಮಂದಿರನ್ನು ಮತ್ತು ಕರ್ಣನನ್ನು ಕೊಂದ ಪಾಂಡವರೊಡನೆ ನಾನು ಸಂಧಿ ಮಾಡಿಕೊಳ್ಳುವುದಿಲ್ಲ,

ಪಾಂಡವರು ಇರುವ ನೆಲ ನನಗೆ ಪಾಳು ನೆಲದಂತೆ ಎಂದು ಹೇಳುತ್ತಾನೆ. ಆಗ ಭೀಷ್ಮ ಬಲರಾಮ ಯುದ್ಧಭೂಮಿಗೆ ಬರುವವರೆಗೆ ಯುದ್ಧ ಮಾಡಬೇಡ, ವೈಶಂಪಾಯನ ಕೊಳದಲ್ಲಿ ಅಡಗಿರೀ ಎಂದು ಹೇಳುತ್ತಾನೆ. ದುರ್ಯೋಧನ ಆ ಮಾತಿಗೆ ಒಪ್ಪಿ ವೈಶಂಪಾಯನ ಕೊಳದಲ್ಲಿ ಅಡಗಿ ಕೊಳ್ಳುತ್ತಾನೆ. ಪಾಂಡವರು ಯುದ್ಧಭೂಮಿಯಲ್ಲಿ ದುರ್ಯೋಧನನನ್ನು ಹುಡುಕುತ್ತಾರೆ. ಕೊನೆಗೆ ಪಾಂಡವರ ಆಳುಗಳು ನಾವು ನೀರು ಕುಡಿಯಲು ವೈಶಂಪಾಯನ ಕೊಳಕ್ಕೆ ಹೋದಾಗ ಅದರ ಹತ್ತಿರ ಹೆಜ್ಜೆಯ ಗುರುತುಗಳನ್ನು ನೋಡಿದೆವು,

ಅವು ಕೊಳದಿಂದ ಹೊರಕ್ಕೆ ಹೋದವಾಗಿದ್ದುವು, ಕೊಳದೊಳಕ್ಕೆ ಹೋದ ಹೆಜ್ಜೆಯ ಗುರುತುಗಳು ಎಲ್ಲೂ ಕಾಣಲಿಲ್ಲ ಎಂದು ಹೇಳುತ್ತಾರೆ. ಪಾಂಡವರು ದುರ್ಯೋಧನ ಕೊಳದೊಳಗೆ ಅಡಗಿರಬೇಕು ಎಂದು ತಿಳಿದು ಕೊಳದ ಹತ್ತಿರ ಹೋಗುತ್ತಾರೆ. ಅಲ್ಲಿ ಹೆಜ್ಜೆಯ ಗುರುತುಗಳನ್ನು ನೋಡಿ ಅವು ದುರ್ಯೋಧನನ ಹೆಜ್ಜೆಗಳು ಎಂದು ತಿಳಿಯುತ್ತಾರೆ.]

ಕೊಳದಲ್ಲಿ ಅಡಗಿಕೊಂಡು ದುರ್ಯೋಧನ ನಮ್ಮ ಮನೆತನದಲ್ಲಿ ಯಾರೂ ಮಾಡದ ಕೆಲಸವನ್ನು ಮಾಡಿದ ಎಂದು ಧರ್ಮರಾಯನು

ನಂಬಿದನು. ಆಗ ಪಾಂಡವರು ಮತ್ತು ಅವರ ಸೈನಿಕರು ಕೊಳದ ಸುತ್ತ ನಿಂತು ಅನೇಕ ತರಹ ಶಬ್ದಗಳನ್ನು ಮಾಡಿದರು. ಆದರೂ ದುರ್ಯೋಧನ ಕೊಳದಿಂದ ಏಳಲಿಲ್ಲ. ಆಗ ಧರ್ಮರಾಯ

ದುರ್ಯೋಧನ ತಮಗೆ ಮಾಡಿದ ಅನ್ಯಾಯಗಳನ್ನು ನೆನಪಿಸಿ ಕ್ಷತ್ರಿಯ ಧರ್ಮವನ್ನು ನೆನೆದು ಹೀಗೆ ಹೇಳಿದನು:

"ಕೌರವೇಶ್ವರ, ಇಂದಿನವರೆಗೂ ಮತ್ಸರದಿಂದ ನೆಂಟರ ಜೊತೆ ಕಾದಾಡಿದೆ. ನಾವು ನಮ್ಮ ನೆಂಟರನ್ನು ಕೊಂದು ಪಾಪಿಗಳಾಗುವಂತೆ ಮಾಡಿದೆ. ಇನ್ನಾದರೂ ಸಂಧಿ ಮಾಡಿಕೊಳ್ಳೋಣ. ನೀನು ಕೊಳದಲ್ಲಿ ಅಡಗಿ-

ರುವುದು ಸರಿಯಲ್ಲ."

ಈ ಮಾತುಗಳನ್ನು ಕೇಳಿ ಭೀಮನಿಗೆ ಸಿಟ್ಟು ಬಂತು. ಈ ಭಗತೆ ನನ್ನ ದನಿ ಕೇಳದೆ ಹೊರಕ್ಕೆ ಬರುವುದಿಲ್ಲ, ಅವನಿಗೆ ನಾನೇ ಸರಿ ಎಂದುಕೊಂಡು ಹೀಗೆ ಹೇಳಿದನು:

ನೀರಿನಲ್ಲಿ ಮೀನುಗಳ ಹಾಗೆ ಇರುವುದು ನಗೆಗೇಡು. ದುರ್ಯೋಧನ ಎಂಬ ಹೆಸರಿಗೆ ಅವಮಾನ. ಸತ್ತರೆ ಮತ್ತೆ ಹುಟ್ಟುವುದಿಲ್ಲವೇನು? ಕೊಳದಿಂದ ಹೊರಕ್ಕೆ ಬಂದು ಆಯುಧಗಳನ್ನು ತೆಗೆದುಕೋ. ಕುರುಕುಲವನ್ನು ನಾಶ ಮಾಡುವ ಭೀಮ ಬಂದಿದ್ದೇನೆ.

ಕೃಷ್ಣನು ಸಂಧಿಯ ಮಾತಾಡಲು ಬಂದಾಗ ಇದ್ದ ಹೆಮ್ಮೆ ಏನಾಯಿತು? ದ್ರೌಪದಿಯ ಬಟ್ಟೆಗಳನ್ನು ಸೆಳೆಸಿದಾಗ ಇದ್ದ ಮದ ಏನಾಯಿತು? ಪಾಂಡವರನ್ನು ಮತ್ಸರದಿಂದ ಕಾಡಿನಲ್ಲಿ ತಿತ್ರಸಿ ಅಲೆಸಿದ ನಿನ್ನ ಸೊಕ್ಕು ಏನಾಯಿತು? ಎಂದು ಭೀಮ ದುರ್ಯೋಧನನನ್ನು ಮೂದಲಿಸಿದನು.

ಭೀಮನ ಮಾತುಗಳನ್ನು ಕೇಳಿ ನೀರೊಳಗಿದ್ದರೂ ಕೂಡ ದುರ್ಯೋಧನನು ಸಿಟ್ಟಿನಿಂದ ಬೆವರಿದನು. ಸಿಟ್ಟಿನಿಂದ ಭುಜದ ಮೇಲೆ ಗದೆಯನ್ನು ಇಟ್ಟುಕೊಂಡು ಕೊಳದಿಂದ ಮೇಲಕ್ಕೆದ್ದನು.

ನೆಲದಿಂದ ಬೆಂಕಿ ಮೇಲಕ್ಕೇಳುವಂತೆ

ಕೊಳದಿಂದ ದುರ್ಯೋಧನನು ಮೇಲಕ್ಕೆ ಎದ್ದು ಭೀಮ ಎಲ್ಲಿದ್ದಾನೆ ಎಂದು ಎಂಟು ದಿಕ್ಕುಗಳನ್ನೂ ನೋಡಿದನು.

ಅಷ್ಟು ಹೊತ್ತಿಗೆ ಸರಿಯಾಗಿ ನೀಲಂತು ಬಟ್ಟೆಗಳನ್ನು ಉಟ್ಟು, ತನ್ನ ಆಯುಧವಾದ ನೇಗಿಲನ್ನು ಹಿಡಿದುಕೊಂಡು ಬಲರಾಮನು ಯುದ್ಧಭೂಮಿಗೆ ಬಂದನು. ತನಗೆ ನಮಸ್ಕರಿಸಿದ ದುರ್ಯೋಧನನನ್ನು ಹರಸಿದನು. ಆದರೆ ಕೃಷ್ಣ ಮತ್ತು ಪಾಂಡವರನ್ನು ಹರಸಲಿಲ್ಲ.

ಈಗ ಬೇರೆ ಮಾತು ಬೇಡ, ದುರ್ಯೋಧನ ವೀರ, ಭೀಮ ದುರ್ಯೋಧನರಿಗೆ ಧರ್ಮಯುದ್ಧ-

ಹಾಗಲಿ ಎಂದು ಬಲರಾಮನು ಹೇಳಿದನು.

ಆಗ ಭೀಮನು ದ್ರೋಣಾಚಾರ್ಯರಿಗೆ ಮನಸ್ಸಿನಲ್ಲೇ ನಮಸ್ಕಾರ ಮಾಡಿದನು. ದುರ್ಯೋಧನನು ಬಲರಾಮನಿಗೆ ನಮಸ್ಕರಿಸಿ ಯುದ್ಧಕ್ಕೆ ಸಿದ್ಧನಾದನು. ಇಬ್ಬರೂ ಯುದ್ಧಭೂಮಿಯಲ್ಲಿ ನಿಂತರು.

ಬಹಳ ಕಾಲದಿಂದ ಹಗೆಗಳಾಗಿದ್ದ ಭೀಮ ದುರ್ಯೋಧನರು ಕಣ್ಣಿನಿಂದಲೇ ಯುದ್ಧ ಮಾಡುವ ಹಾಗೆ ಒಬ್ಬರನ್ನೊಬ್ಬರು ನೋಡಿದರು.

ಬೆಂಕಿಯನ್ನು ಉಗುಳುವಂತೆ, ಬಿಸಿರಕ್ತವನ್ನು ಎಲ್ಲ ಕಡೆಗೂ ಎರಚುವಂತೆ, ಬಿಟ್ಟ ಕಣ್ಣುಗಳಿಂದ ಒಬ್ಬರನ್ನೊಬ್ಬರು ನುಂಗುವಂತೆ, ಭೀಮ ದುರ್ಯೋಧನರು ನೋಡಿದರು.

ಗದೆಗದೆಗೆ ತಾಕಿದಾಗ ಹುಟ್ಟಿದ ಕಿಡಿಗಳು ಎಲ್ಲ ಕಡೆ ಹರಡಿದುವು. ಯುದ್ಧ ಮಾಡುವಾಗ ಎದ್ದ ಧೂಳು ಆಕಾಶವನ್ನು ಕವಿಯಿತು. ದೇವತೆಗಳಿಗೆ ಹೆದರಿಕೆಯಾಗುವ ಹಾಗೆ ಆ ವೀರರು ಕಾದಿದರು.

ಇಬ್ಬರೂ ವೀರರು, ಇಬ್ಬರಿಗೂ ಯುದ್ಧವಿದ್ಯೆ ಚೆನ್ನಾಗಿ ಗೊತ್ತಿತ್ತು. ಯಾರಿಗೂ ಜಯವಾಗಲಿಲ್ಲ.

ಆಗ ದುರ್ಯೋಧನನು ಸಿಟ್ಟಿನಿಂದ ಭೀಮನನ್ನು ಮೂದಲಿಸಿ ಬರಸಿಡಿಲಿನ ಹಾಗೆ ಅವನ ಮೇಲೆ ಬಿದ್ದು ಹೊಡೆದನು. ಭೀಮನಿಗೆ ಮೂರ್ಛೆ ಬಂತು.

ದುರ್ಯೋಧನನು ಧರ್ಮಯುದ್ಧವನ್ನು ನೆನೆದು

ಬಿದ್ದವನನ್ನು ಹೊಡೆಯುವುದಿಲ್ಲ ಎಂದು ಗದೆಯಿಂದ ಭೀಮನಿಗೆ ಗಾಳಿ ಬೀಸಿದನು. ಆಗ ಭೀಮನಿಗೆ ಎಚ್ಚರವಾಯಿತು.

ಆಗ ಕೃಷ್ಣ ತನ್ನ ತೊಡೆಯನ್ನು ತಟ್ಟಿ ದುರ್ಯೋಧನನ ತೊಡೆಗೆ ಹೊಡೆ ಎಂದು ಭೀಮನಿಗೆ ಸೂಚಿಸಿದನು. ಅದು ಬೇರೆಯವರಿಗೆ ತಿಳಿಯಲಿಲ್ಲ.

ಆ ಸೂಚನೆಯ ಪ್ರಕಾರ ಭೀಮನು ದುರ್ಯೋಧನನ ತೊಡೆಗಳನ್ನು ಗದೆಯಿಂದ ಹೊಡೆದನು. ದುರ್ಯೋಧನನು ದೊಡ್ಡ ಬೆಟ್ಟ ಬೀಳುವಂತೆ ಕೆಳಗೆ ಬಿದ್ದನು.

ದುರ್ಯೋಧನನ ಕಿರೀಟವನ್ನು ಕಾಲಿನಿಂದ ಒದೆಯುತ್ತೇನೆ ಎಂದು ತಾನು ಹಿಂದೆ ಮಾಡಿದ್ದ ಪ್ರತಿಜ್ಞೆಯನ್ನು ಭೀಮನು ನೆನೆಸಿಕೊಂಡನು. ಬಲರಾಮ ಮೊದಲಾದವರು ಚಕ್ರವರ್ತಿಯನ್ನು ಅವಮಾನ ಮಾಡುವುದು ಸರಿಯಲ್ಲ ಎಂದು ಹೇಳಿದರೂ ಕೂಡ ತನ್ನ ಎಡಗಾಲಿನಿಂದ ದುರ್ಯೋಧನನ ಕಿರೀಟವನ್ನು ಭೀಮ ಒದೆದನು.

ಅಡಗಿಕೊ	To hide
ಅಲೆ	Wander
ಆಯುಧ	Tools, weapon
ಉಗುಳು	Spit
ಎರಚು	Throw
ಕವಿ	To cloud
ಕಿಡಿ	Sparkle
ಗದೆ	Mace
ಗುರುತು	Mark
ತಿರ್ರನೆ	Round and round
ದನಿ	Voice
ದಿಕ್ಕು	Direction
ನಗೆಗೀಡು	To be laughed at
ನೀಲ	Blue
ನುಂಗು	Swallow
ನೇಗಿಲು	Plough
ಪಾಳುನೆಲ	Barren land
ಪಾಪಿ	Sinner
ಬರಸಿಡಿಲು	Dry thunderbolt (without rain)

ಬಿಸಿ	Hot
ಬೆವರು	Sweat
ಭೂತ	Ghost
ಮೂರ್ಛೆ	Swooning
ಮೂದಲಿಸು	Taunt
ಮತ್ಸರ	Jealousy
ರಕ್ತ	Blood
ಸೆಳೆ	Pull
ಸೊಕ್ಕು	Conceit
ಸಂಧಿ	Treaty
ಹೆಜ್ಜೆ	Foot

ಮಾಸ್ತಿ ವೆಂಕಟೇಶ ಅಯ್ಯಂಗಾರ್ಯ, 1891-

ವೆಂಕಟೇಶ ಅಯ್ಯಂಗಾರ್ಯರು ಬೆಂಗಳೂರಿನ ಹತ್ತಿರ ಇರುವ ಮಾಸ್ತಿಯಲ್ಲಿ 1891 ರಲ್ಲಿ ಹುಟ್ಟಿದರು. ಅವರು ಮೈಸೂರು ಹತ್ತಿರ ಇರುವ ಮಳವಳ್ಳಿ ಮತ್ತು ಮೈಸೂರಿನಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸ ಮಾಡಿದರು ಅವರ ಕಾಲೇಜು ವಿದ್ಯಾಭ್ಯಾಸ ಬೆಂಗಳೂರಿನ ಸೆಂಟ್ರಲ್ ಕಾಲೇಜು ಮತ್ತು ಮದರಾಸಿನ ಪ್ರೆಸಿಡೆನ್ಸಿ ಕಾಲೇಜುಗಳಲ್ಲಿ ಆಯಿತು. 1913 ರಲ್ಲಿ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಮೊದಲನೆಯ ಸ್ಥಾನ ಪಡೆದರು ಆ ಮೇಲೆ ಮೈಸೂರು ಸಿವಿಲ್ ಸರ್ವೀಸ್ ಸೇರಿ ಡೆಪ್ಯುಟಿ ಕಮಿಷನರ್, ಸೆನ್ಸಸ್ ಸೂಪರಿಂಟೆಂಡೆಂಟ್ ಮತ್ತು ಬೇರೆ ಇಲಾಖೆಗಳ ಮುಖ್ಯಸ್ಥರಾಗಿ ಕೆಲಸ ಮಾಡಿದರು. ಅವರು 1942 ರಲ್ಲಿ ಸರ್ಕಾರಿ ಕೆಲಸದಿಂದ ನಿವೃತ್ತರಾದರು. ಮೈಸೂರು ಸರ್ಕಾರ

ಇವರ ಸೇವೆಯನ್ನು ಮೆಚ್ಚಿ ರಾಜಸೇವಾಪ್ರಸಕ್ತ ಎಂಬ ಬಿರುದನ್ನು ಕೊಟ್ಟರು.

ಮಾಸ್ತಿಯವರು 1910-11 ರಲ್ಲಿ ಸಣ್ಣ ಕತೆಗಳನ್ನು ಬರೆಯಲು ಪ್ರಾರಂಭಿಸಿದರು. ಅವರ ಮೊದಲನೆಯ ಪುಸ್ತಕವಾದ ಕೆಲವು ಸಣ್ಣ ಕತೆಗಳು 1920 ರಲ್ಲಿ ಪ್ರಕಟವಾಯಿತು. ಅವರು ಸಣ್ಣ ಕತೆಗಳ ಹತ್ತು ಸಂಗ್ರಹಗಳು, ಕವನಗಳು, ನಾಟಕಗಳು, ವಿಮರ್ಶೆ ಮತ್ತು ಕಾದಂಬರಿಗಳನ್ನು ಬರೆದಿದ್ದಾರೆ. ಅವರ ಚನ್ನಬಸವ ನಾಯಕ ಮತ್ತು ಚಿಕವೀರ ರಾಜೇಂದ್ರ ಐತಿಹಾಸಿಕ ಕಾದಂಬರಿಗಳು. ಎರಡು ಕಾದಂಬರಿಗಳ ಆಧಾರ ಮೈಸೂರು ದೇಶದ ಚರಿತ್ರೆ. ಮಾಸ್ತಿಯವರು ಇಂಗ್ಲಿಷ್, ಬಂಗಾಳಿ ಮತ್ತು ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಅವರ ಪುಸ್ತಕಗಳು ಇಂಗ್ಲಿಷ್ ಮತ್ತು ಭಾರತದ ಇತರ ಭಾಷೆಗಳಿಗೆ ಭಾಷಾಂತರ ಆಗಿವೆ.

ಮಾಸ್ತಿಯವರು 1944 ರಿಂದ ಜೀವನ ಮಾಸಪತ್ರಿಕೆಯ ಸಂಪಾದಕರಾಗಿದ್ದಾರೆ. ಅದರಲ್ಲಿ ಕತೆಗಳು, ಕವನಗಳು, ವಿಮರ್ಶೆ ಮತ್ತು ರಾಜಕೀಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಪ್ರಕಟಿಸುತ್ತಾರೆ. ಮಾಸ್ತಿಯವರಿಗೆ ಮೊದಲಿನಿಂದ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ಬಗ್ಗೆ ಬಹಳ ನಂಬಿಕೆ ಇದೆ. ಕನ್ನಡ ದೇಶದಲ್ಲಿ ಕನ್ನಡಕ್ಕೆ ಮೊದಲನೆ ಜಾಗ ಇರಬೇಕು ಎಂದು ಬಹಳ ವರ್ಷಗಳಿಂದ ಹೇಳುತ್ತಿದ್ದಾರೆ. ಕನ್ನಡ ಭಾಷೆಗೆ ಮಾಸ್ತಿಯವರು ಮಾಡಿರುವ ಸೇವೆಯನ್ನು ಮೆಚ್ಚಿ ಕರ್ನಾಟಕ ವಿಶ್ವವಿದ್ಯಾನಿಲಯ ಅವರಿಗೆ ಡಾಕ್ಟರೇಟ್ ಪದವಿ ಕೊಟ್ಟು ಗೌರವಿಸಿದೆ. ಕನ್ನಡ ಸಾಹಿತ್ಯ ಸಮ್ಮೇಳನದ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮಾಸ್ತಿಯವರು ಬಹಳ ಕೆಲಸ ಮಾಡಿದ್ದಾರೆ.

ಮಾಸ್ತಿಯವರು ಉಪಯೋಗಿಸುವ ಭಾಷೆ

ಮೈಸೂರು ದೇಶದ ಮಧ್ಯಮ ವರ್ಗದ ಜನ ಉಪಯೋಗಿಸುವ ಭಾಷೆ. ಅವರ ಪುಸ್ತಕಗಳು ಇಪ್ಪತ್ತು ಮೂವತ್ತು ವರ್ಷಗಳ ಹಿಂದಿನ ಸಮಾಜವನ್ನು ಚೆನ್ನಾಗಿ ಚಿತ್ರಿಸುತ್ತವೆ.

ತಮ್ಮ ಕವನಗಳಲ್ಲಿ ಮಾಸ್ತಿಯವರು ಗದ್ಯ ಮತ್ತು ಪದ್ಯಕ್ಕೆ ಹೆಚ್ಚು ವ್ಯತ್ಯಾಸ ಇರಬೇಕಾಗಿಲ್ಲ ಎಂದು ತೋರಿಸಿಕೊಟ್ಟರು. ಸಾನೆಟ್ ಮತ್ತು ಸರಳ ರಗಳೆಗಳನ್ನು ಕನ್ನಡಕ್ಕೆ ಹೊಂದಿಸಿ ಕೊಂಡರು. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಪ್ರಯೋಗ ಮಾಡಿದ್ದಾರೆ. ಈ ಕಾರಣಗಳಿಂದ ಆಧುನಿಕ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಮಾಸ್ತಿಯವರಿಗೆ ಮುಖ್ಯ ಸ್ಥಾನ ಇದೆ.

ಆಧುನಿಕ	Modern
ಇಲಾಖೆ	Department
ಪ್ರಯೋಗ	Experiment
ರಗಳೆ	Blank verse
ರಾಜಸೇವಾ - ಪ್ರಸಕ್ತ	A title - devoted to royal service
ಮುಖ್ಯಸ್ಥ	Chief
ಸರಳ	Simple

ಚಿಕ ವೀರ ರಾಜೇಂದ್ರ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯ.

(ಆಧಾರ) ಪುಟ 415- 416.

ಕುಶಾಲನಗರದಲ್ಲಿ ಕರ್ನಲ್ ಸಾಹೇಬ ಬೋಪಣ್ಣನಿಗೆ ನೀವು ಇಲ್ಲಿ ಬರುತ್ತೀರಾ ನಾವು ಅಲ್ಲಿಗೆ ಬರೋಣವೇನು, ತಮ್ಮ ಇಷ್ಟ ತಿಳಿಸಿ. ತಮ್ಮ ಮರ್ಯಾದೆಗೆ ಕಡಿಮೆ ಆಗುವ ಯಾವ [illegible] ಕೆಲಸವನ್ನು ನಾವು ಸೂಚಿಸುವುದಿಲ್ಲ ಎಂದು ಹೇಳಿ ಕಳುಹಿಸಿದನು. ಬೋಪಣ್ಣ ನಾವೇ ಅಲ್ಲಿಗೆ ಬರುತ್ತೇವೆ ಎಂದು ಹೇಳಿ ಕಳುಹಿಸಿ ಅದೇ ಸಂಜೆಯೊಳಗೆ ಅವನ ಶಿಬಿರಕ್ಕೆ ಹೋದನು. ಫ್ರೇಸರ್ ಬೋಪಣ್ಣನನ್ನು ಬಹಳ ಗೌರವದಿಂದ ಬರಮಾಡಿಕೊಂಡನು. ತನ್ನ ಗುಡಾರಕ್ಕೆ ಕರೆದು ಕೊಂಡು ಹೋಗಿ ಒಂದು ಪೀಠವನ್ನು ಕೊಟ್ಟು ಅವನು ಕುಳಿತ ಮೇಲೆ

ತಾನು ಕುಳಿತನು. ತಾವು ಕೊಡಗಿನ ಮಂತ್ರಿಗಳು, ತಮ್ಮ ಸ್ಥಾನ ದೊಡ್ಡದು, ತಾವೇ ಇಲ್ಲಿಗೆ ಬಂದಿರುವುದು ತಮ್ಮ ಸೌಜನ್ಯ ತೋರಿಸುತ್ತದೆ, ತಮಗೆ ಜಂಬ ಇಲ್ಲ ಎಂದು ಜನ ಹೇಳುವುದು ತಪ್ಪಲ್ಲ ಎಂದನು.

ಜನಕ್ಕೆ ನಮ್ಮ ವಿಚಾರ ಗೊತ್ತಿಲ್ಲ ಬಿಡಿ. ಆದರೆ ನಿಮ್ಮ ಒಳ್ಳೆ ಮಾತು ನಮಗೆ ಬೇಕು ಎಂದು ಬೋಪಣ್ಣ ಹೇಳಿದನು. ಬಹಳ ಸಂತೋಷ, ಕುಂಪಣಿ ಸರ್ಕಾರ ಮತ್ತು ಕೊಡಗಿನ ಮಧ್ಯದ ಈ ವ್ಯವಹಾರದ ವಿಷಯ ನೀವು ಏನು ಯೋಚಿಸಿದ್ದೀರಿ ಎಂದು ಫ್ರೇಸರ್ ಹೇಳಿದನು.

ಬೋಪಣ್ಣ: ಅರಸರು ಅವರ ತಂಗಿ, ತಂಗಿಯ ಯಜಮಾನರ ವಿಷಯಕ್ಕೆ ತಪ್ಪಿ ನಡೆದಿದ್ದಾರೆ. ತಂಗಿ, ತಂಗಿಯ

ಯಜಮಾನರು ನಿಮ್ಮ ಹತ್ತಿರ ಬಂದಿದ್ದಾರೆ. ಆ ವಿಷಯ ಮಾತಾಡುವುದಕ್ಕೆ ನೀವು ನಿಯೋಗಿಗಳನ್ನು ಕಳುಹಿಸಿದ್ದೀರಿ. ಅರಸರು ಅವರನ್ನು ಸೆರೆ ಹಿಡಿದಿದ್ದಾರೆ. ತಂಗಿ, ತಂಗಿಯ ಯಜಮಾನರ ಮರ್ಯಾದೆಯನ್ನು ಕಾಪಾಡುವುದಕ್ಕೆ, ನಿಯೋಗಿಗಳನ್ನು ಬಿಡಿಸಿ ಕೊಳ್ಳುವುದಕ್ಕೆ ನೀವು ಕೊಡಗಿನ ಮೇಲೆ ಸೇನೆ ತಂದಿದ್ದೀರಿ.

ಶ್ರೀಧರ್: ಅರಸರು ಅವರ ತಂಗಿಯ ಮಗುವನ್ನು ಕೊಂದಿದ್ದಾರೆ. ಅವರನ್ನು ದಂಡಿಸುವುದು ನಮ್ಮ ಕರ್ತವ್ಯ. ಕೊಡಗಿನ ಕ್ಷೇಮಕ್ಕೆ ತಕ್ಕ ವ್ಯವಸ್ಥೆ ಮಾಡುವುದು ಕೂಡ ನಮ್ಮ ಕರ್ತವ್ಯ ಎಂದು ಕಂಪನಿ ಸರಕಾರ ತಿಳಿದಿದ್ದಾರೆ.

ಬೋಪಣ್ಣ: ತಂಗಿ, ತಂಗಿಯ ಯಜಮಾನರ ಮರ್ಯಾದೆ ಎಂದದ್ದರಲ್ಲಿ ಅರಸರು ಅವರ ಮಗುವನ್ನು ಕೊಂದ

ಕಥೆ ಕೂಡ ಸೇರಿದೆ. ಹೆಂಗಸಿನ ಪ್ರೇಮ ಹೆಂಗಸಿನ ಹಕ್ಕುಗಳು ನೋಡಿಕೊಳ್ಳುವ ವಿಷಯ. ಹೊರಗಿನ ಜನರಿಗೆ ಸೇರಿದ್ದಲ್ಲ.

ಶ್ರೀಧರ್: ಹೆಂಗಸಿನ ಹಕ್ಕುಗಳು ಬೇಡ ಎಂದು ಹೇಳುವ ವ್ಯವಸ್ಥೆಯನ್ನು ನಾವು ಬಲವಂತದಿಂದ ಹೇರುವುದಿಲ್ಲ. ನೀವು ನಿಮ್ಮ ದೇಶವನ್ನು ನೋಡಿಕೊಳ್ಳಬಲ್ಲಿರಿ. ಇದು ಕುಂಪನಿ ಸರಕಾರಕ್ಕೆ ಬಿಟ್ಟಿದೆ. ಆದರೆ ಇಂತಹ ಸಂದರ್ಭದಲ್ಲಿ ದೇಶದ ಜನ ತಪ್ಪು ತಿದ್ದುವುದು ಕಷ್ಟವಾಗುತ್ತದೆ. ಸ್ವೀಕಾರದಿಂದ ಬೇರೆಯ ಜನ ಸಹಾಯ ಬಯಸುತ್ತಾರೆ. ಇಂಥ ಸಹಾಯವನ್ನ ಮಾತ್ರ ನಾವು ಈಗ ನಿಮಗೆ ಸೂಚಿಸುತ್ತಿರುವುದು.

ಬೋನರ್ಜೀ: ಸಂತೋಷ, ನಮ್ಮ ಉದ್ದೇಶ ಏನು ತಿಳಿಸಿರಿ.

ಶ್ರೀಧರ್: ಅವರು ಪಂಡಿತರ ಸರಕಾರವನ್ನು ಧಿಕ್ಕರಿಸಿದ್ದಾರೆ.

ಹುಂಡಿಗೆ ಸರಕಾರ ಆಶ್ರಯ ಕೊಟ್ಟರು ಎಂದು ತಂಗಿಯ ಮಗುವನ್ನು ಕೊಂದಿದ್ದಾರೆ. ಧಿಕ್ಕಾರಕ್ಕೆ ಶಿಕ್ಷೆಯಾಗಿ ಅವರನ್ನು ಮರಣದಂಡನೆಗೆ ವಿಧಿಸುವುದೇ ನೋಡಬೇಕು.

ಬೋಧಿಜ್ಞ: ಅರಸರನ್ನು ಗಾದಿಯಿಂದ ನಮ್ಮ ಹಿರಿಯರು ಇಳಿಸಿದ್ದಾರೆ. ಈ ವಿಷಯದಲ್ಲಿ ಇನ್ನು ನಮ್ಮ ಪ್ರವೇಶ ಅವಶ್ಯಕವಿಲ್ಲ.

ಶ್ರೋತೃ: ಸರಿ.

ಬೋಧಿಜ್ಞ: ತಂಗಿಯ ಮಗುವನ್ನು ಕೊಂದ ಬಗ್ಗೆ ಅರಸರನ್ನು ದಂಡಿಸುವುದಕ್ಕೆ ನಮಗೆ ಅಧಿಕಾರವಿಲ್ಲ. ಅವರು ತುಂಡಿಗೆಯ ಪ್ರಜೆಯಲ್ಲ.

ಶ್ರೋತೃ: ಸರಿಯಾದ ಮಾತು. ದಂಡಿಸಬೇಕು ಎಂದು ಹೊರಗಿನ ನೀವು ಅಪೇಕ್ಷಿಸಿದ್ದೀರಿ ಎಂದು ನಾವು

ತಿಳಿದಷ್ಟು. ಬೇಡ ಎಂದು ನೀವು ಹೇಳಿದರೆ ನಾವು ಅದರಲ್ಲಿ ಪ್ರವೇಶ ಮಾಡುವುದಿಲ್ಲ.

ಬೋಜೇಗೌಡ: ಸರಿಯಾಯಿತು, ಮುಂದೆ ಏನು ಹೇಳಿ.

ಶ್ರೀಧರ: ನಮ್ಮ ನಿಯೋಗಿಗಳನ್ನು ಕೂಡಲೇ ನಮಗೆ ಬಿಟ್ಟು ಕೊಡಬೇಕು. ಅರಸರ ತೆಂಗ, ರಂಗ ಯಜಮಾನರ ವಿಷಯದಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕು. ನಾವು ನೀವೆಂತು ಹೋಗಲೆ ಇಲ್ಲಿಗೆ ಬಂದ ವಿಮಾನವನ್ನು ನಮಗೆ ಕೊಡಬೇಕು. ಮುಂದೆ ಹೋಗುವಲ್ಲಿ ವ್ಯವಸ್ಥೆ ಸರಿಯಾಗಿ ಇರುತ್ತದೆ ಎಂದು ನಮಗೆ ಒಪ್ಪಿಗೆಯಾಗುವ ಏರ್ಪಾಡನ್ನು ಮಾಡಬೇಕು.

ಅಪೇಕ್ಷಿಸು	Desire
ಕೊಡಗು	Coorg - a part of West Mysore
ಗಳಿಗೆ	Moment
ಗುಡಾರ	Tent
ಗಾದಿ	Throne
ಜಂಬ	Pride
ತಿದ್ದು	Correct
ದಂಡಿಸು	Punish
ಧಿಕ್ಕರಿಸು	Defy
ನಿಂತೊಳಿಗ	Ambassador
ಪೀಠ	Seat
ಪ್ರಜೆ	Subjects, citizen
ಪ್ರವೇಶ	Entrance
ಬಲವಂತ	Compulsion

ಮರಣ ದಂಡನೆ	Death penalty
ಮರ್ಯಾದೆ	Respect
ವಿಧಿಸು	To sentence
ವ್ಯವಸ್ಥೆ	Arrangement
ಸೌಜನ್ಯ	Good nature
ಸೇನೆ	Army
ಹೇರು	Impose burden.

ಬೆಟಗೇರಿ ಕೃಷ್ಣಶರ್ಮ, 1900-

ಕೃಷ್ಣಶರ್ಮರು ಬೆಳಗಾಂವಿ ಜಿಲ್ಲೆಯ ಗೋಕಾಕ ತಾಲೂಕಿನಲ್ಲಿರುವ ಬೆಟಗೇರಿಯಲ್ಲಿ 1900 ರಲ್ಲಿ ಹುಟ್ಟಿದರು. ಅವರ ಹನ್ನೆರಡನೆಯ ವಯಸ್ಸಿನಲ್ಲಿ ಅವರ ತಂದೆ ಕಾಲವಾದರು. ಆದ್ದರಿಂದ ಅವರು ಹೆಚ್ಚು ಓದಲು ಆಗಲಿಲ್ಲ. 17 ನೆಯ ವಯಸ್ಸಿನಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಣವನ್ನು ಮುಗಿಸಿದರು. ಮುಂದೆ ಶಾಲೆಯಲ್ಲಿ ಓದಲಿಲ್ಲ.

ಕೃಷ್ಣಶರ್ಮರು ತಾವೇ ಇಂಗ್ಲಿಷ್ ಕಲಿತು ಇಂಗ್ಲಿಷ್ ಸಾಹಿತ್ಯವನ್ನು ಅಭ್ಯಾಸ ಮಾಡಿದರು. ಸಣ್ಣಕತೆ, ಕಾದಂಬರಿ, ಕವಿತೆ, ನಾಟಕ, ವಿಮರ್ಶೆ, ಪ್ರಬಂಧ - ಈ ಎಲ್ಲ ಪ್ರಕಾರಗಳನ್ನು

ಉಪಯೋಗಿಸಿದ್ದಾರೆ. ಕೃಷ್ಣಶರ್ಮರು 1927 ರಿಂದ 1930 ರ ವರೆಗೆ ಬೆಂಗಳೂರಿನ [illegible] ವಿದ್ಯಾಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. 1930 ರಿಂದ ಧಾರವಾಡದಲ್ಲಿ ಇದ್ದಾರೆ. ಸ್ವಧರ್ಮ, ಜಯ ಕರ್ನಾಟಕ, ಕಾಲು ವರ್ತಮಾನ, ಜಯಂತಿ – ಈ ಪತ್ರಿಕೆಗಳ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಅವರ ಮೊದಲ ಕವನ ಸಂಗ್ರಹ ಮುದ್ದಿನ ಮಾತು. ಅದಕ್ಕೆ ದೇವರಾಜ ಬಹದ್ದೂರ್ ಬಹುಮಾನ ಬಂತು. ಅವರ ಕತೆಗಳು ಭಾರತದ ಬೇರೆಯ ಕೆಲವು ಭಾಷೆಗಳಿಗೆ ಅನುವಾದವಾಗಿವೆ. ಅವರ ಕತೆಗಳ ಪುಸ್ತಕ ಹಳ್ಳಿಯ ಜೀವನ. ಅವರು ಎರಡು ಸಾಮಾಜಿಕ ಮತ್ತು ಮೂರು ಐತಿಹಾಸಿಕ ಕಾದಂಬರಿಗಳನ್ನು ಬರೆದಿದ್ದಾರೆ. ಅವರ ಸಾಮಾಜಿಕ ಕಾದಂಬರಿ ಮಗಳ ಮದುವೆಗೆ 1956 ರಲ್ಲಿ ಮುಂಬಯಿ ಸರಕಾರದ

ಬಹುಮಾನ ಬಂತು. ಇವರ ಅಗ್ರಾಂತಿ ಪರ್ವ ವಿಜಯನಗರಕ್ಕೆ ಸಂಬಂಧಿಸಿದ ಕಾದಂಬರಿ. ಅವರು ಅನೇಕ ಸಮ್ಮೇಳನಗಳ ಅಧ್ಯಕ್ಷರಾಗಿ ಕೆಲಸಮಾಡಿದ್ದಾರೆ.

ಕೃಷ್ಣಶರ್ಮರು ಉಪಯೋಗಿಸುವ ಭಾಷೆ ಉತ್ತರ ಕರ್ನಾಟಕದ ಜನರು ಉಪಯೋಗಿಸುವ ಭಾಷೆ. ಅವರ ಕತೆಗಳಲ್ಲಿ ಹಳ್ಳಿಯ ಜನಜೀವನದ ಚಿತ್ರ ಚೆನ್ನಾಗಿದೆ.

ಅನುವಾದ	Translation
ಕವಿತೆ	Poetry
ಪ್ರಬಂಧ	Essay
ಪ್ರಾಥಮಿಕ	Primary
ಶಿಕ್ಷಣ	Education.

ಜನಪದ ಜೀವನ ಬೆಟಗೇರಿ ಕೃಷ್ಣಶರ್ಮಾ

(ಆಧಾರ) ನಂದನೂರಿನ ಜಾತ್ರೆ ಪುಟ 158-160.

ಸಂಗಾತಾನಿ ಹೇಳುವಳು:

"ನಿಮ್ಮ ದೃಷ್ಟಿಯಲ್ಲಿ ಆಟಗಾತಿ ಆಗಿ ಊರೂರು ತಿರುಗುವುದು ಕೀಳು ಇರಬಹುದು... ನಾನು ಒಪ್ಪುತೇನಿ. ಆದರೆ ಇದರೊಳಗೆ ನಾನು ಇದುವರೆಗೆ ಬಂದು ಆನಂದ-ಸಮಾಧಾನ ಕಂಡಿದ್ದೇನಿ. ಮದುವೆ ಮಾಡಿಕೊಂಡು ಒಬ್ಬನನ್ನು ಮೆಚ್ಚಿಸುವ ಕುಲದಲ್ಲಿ ನಾನು ಹುಟ್ಟಲಿಲ್ಲ. ಇದು ನನ್ನ ಹಿಂದಿನ ಜನ್ಮದ ಕರ್ಮದ ಫಲ. ಅದಕ್ಕೆ ಯಾರು ಏನು ಮಾಡಲಿಕ್ಕೆ ಆಗುತ್ತದೆ? ದೇವರು ನನಗೆ ಸ್ವಲ್ಪ ಕಲೆ ಕೊಟ್ಟಿದ್ದಾನೆ. ಅದನ್ನು ಹತ್ತು ಜನರಿಗೆ ತೋರಿಸಿ ಸಂತೋಷ ಪಡಿಸಿದರೆ ನನಗೆ ಕೂಡ ಸಂತೋಷ ಆಗುತ್ತದೆ. ಆ ಸಂತೋಷದಲ್ಲಿ ನನ್ನ ಕೊರತೆಗಳನ್ನು ಮರೆಯುತ್ತೇನೆ.' ಆಟಗಾತಿ

ಗಂಗಾಸಾನಿ' ಎಂದು ಜನ ನನ್ನನ್ನು ಗುರುತಿಸಿದರೆ ನನ್ನ ಮನಸ್ಸಿಗೆ ನೋವಾಗುವುದಿಲ್ಲ. ಆದರೆ 'ದೇಸಾಯರ ಸೊಸೆ' ಎಂದು ಜನ ಗುರುತಿಸುವುದನ್ನು ತಾಳಿಕೊಳ್ಳಲಿಕ್ಕೆ ನನಗೆ ಆಗುವುದಿಲ್ಲ."

ದೇಸಾಯಿಯವರು ಸುಮ್ಮನೆ ಕುಳಿತಿದ್ದರು. ಸ್ವಲ್ಪ ಹೊತ್ತು ಬಿಟ್ಟು ಗಂಗಾಸಾನಿ ಮತ್ತೆ ಮಾತನಾಡಿದಳು:

"ಇನ್ನು ಒಂದು ಮಾತು ಧಣೀರ! ನಾನು ಬಂದ ಸುದ್ದಿ ಕೇಳಿ ತಮ್ಮ ಅಪ್ಪನವರು ಇಂದ ತವರಮನೆಗೆ ಹೋದರು ಎಂದು ಕೇಳಿದೆ!"

ಬೇಸರದ ಧ್ವನಿಯಲ್ಲಿ ದೇಸಾಯಿಯವರು ಹೇಳಿದರು:

"ಹುಂ... ಹೌದು, ಹೋದದ್ದು ಖರೆ!"

"ಒಂದು ವೇಳೆ ನಾನು ಇಲ್ಲಿ ಇರಲಿಕ್ಕೆ ಒಪ್ಪಿಕೊಂಡರೆ

ಅವರು ಮತ್ತೆ ಇಲ್ಲಿಗೆ ಬರ್ತಾರೇನು?"

ನಿಟ್ಟುಸಿರಿನಿಂದ ದೇಸಾಯಿಯವರು ಹೇಳಿದರು:

"ಮತ್ತೆ ಬಾರದಿದ್ದರೆ ಬಿಡಲಿ... ತವರುಮನೆಯಲ್ಲೇ ಇರಲಿ!"

"ಅವರ ಜೊತೆ ನೀವು ಈಗ ಹತ್ತು ಹನ್ನೆರಡು ವರ್ಷ ಸಂಸಾರ ಮಾಡಿದೀರಿ ಅಲ್ಲ?"

ದೇಸಾಯಿಯವರು ಉತ್ತರ ಕೊಡಲಿಲ್ಲ. ಸುಮ್ಮನೆ ಕುಳಿತಿದ್ದರು; ಗಂಗಾಸಾನಿಯೇ ಮತ್ತೆ ಹೇಳಿದಳು:

"ಅವ್ವನವರು ದೊಡ್ಡ ಮನೆತನದೊಳಗೆ ಹುಟ್ಟಿದವರು! ನನಗಿಂತ ಅದಂಗೆ ಕಡಿಮೆ ತಿಳುವಳಿಕೆ ಇಲ್ಲ ಎಂದು ಹೇಳಿದೀನಿ. ಅವರು ಕೈ ಹಿಡಿದ ಧರ್ಮದ ಹೆಂಡತಿ! ನಾನು ಊರೂರು ತಿರುಗುವ ಅಬಗಾರ್ತಿ! ಮಳೆಯ ನೀರು ಬಿಟ್ಟು

ಮಂಜಿನ ನೀರಿಗೆ ಬಾಯಿ ಬಿಡುವುದು ಚಕೋರದ ಸ್ವಭಾವ ಅಂತ ಕಾಣ್ತದೆ. ಧರ್ಮ ದೀಕ್ಷೆ ಅಂದರೆ ಒಂದು ಹೂ ಇದ್ದ ಹಾಗೆ. ಗಾಸಿ ಆಗದ ಹಾಗೆ ಅದರ ಜೊತೆ ನಡೆದುಕೊಂಡರೆ ಅದು... ಈ ಮಲ್ಲಿಗೆ ಹೂವಿನ ಹಾಗೆ ಬಾಳಿಗೆ ತಂಪು ಕೊಡ್ತದೆ. ಅದನ್ನು ಗಾಸಿ ಮಾಡಿದರೆ, ಫಲ ಕೊಡದೆ ಒಣಗಿ ಹೋಗ್ತದೆ! ಇಲ್ಲಿಯು ಮಲ್ಲಿಗೆ ಬಳ್ಳಿ ಕಿತ್ತು ಬೇರೆ ಮಲ್ಲಿಗೆ ಬಳ್ಳಿ ಹಬ್ಬಿಸಬೇಕಾದರೆ ಬಹಳ ಕಷ್ಟ. ಹಾಗೆ ಹೇಳಿದೆ ಅಂತ ಸಿಟ್ಟು ಮಾಡಬೇಡಿ."

ಬಹಳ ಹೊತ್ತು ಸುಮ್ಮನೆ ಕುಳಿತಿದ್ದು ಆಮೇಲೆ ದೇಸಾಯಿಯವರು ಕೇಳಿದರು:

"ಬಿಟ್ಟನಲ್ಲ ನಿನ್ನ ಮನಸಿನೊಳಗೆ ಇರುವುದು ಏನು?"

"ಇನ್ನು ಹೋಗಬೇಕೇನ್ರೀ ನಿಮಗೆ! ಇಂದು ಶನಿವಾರ.
ನಾಳೆ ಬರುವ ಮಂಗಳವಾರ ಚಿನ್ನಗೇರಿ ಊರಿನಲ್ಲಿ
ಆಟ ಆಡಲಿಕ್ಕೆ ನಾನು ಒಪ್ಪಿಕೊಂಡಿದ್ದೇನೆ. ಯಾಕೆ
ಬರಲಿಲ್ಲ ಅಂತ ನನ್ನ ಹೆಂಡತಿ ವರು ದಾರಿ -
ನೋಡ್ತಿದ್ದಾಳೆ. ನನ್ನ ಬೇಗ ಊರಿಗೆ ಕಳಿಸಿಬಿಡಿ!"

ಅಭಿನಗಾರ್ತಿ	Actress
[illegible]	Hurt
ಖರೆ	True
ಗಾಸಿ	Hurt
ಚೆಲುವಿಕೆ	Beauty
ಜನಪದ	People, folk.
[illegible]	Bear
ತಂಪು	Cool
ದಾರಿ ನೋಡು	Expect someone's arrival.
[illegible]	Lord
ಬಳ್ಳಿ	Creeper
ಮಂಜು	Mist
ಮಲ್ಲಿಗೆ ಹೂ	Jasmine

"ಇಲ್ಲಿಯ ತೀರ್ಪು" ಮಾಸ್ತಿ ವೆಂಕಟೇಶ ಅಯ್ಯಂಗಾರ್ಯ
(ಸಣ್ಣ ಕತೆಗಳು, ಪುಟ 12-13) (ಉದ್ಧಾರ)

ನೀವು ಕ್ರಿಸ್ತಮತಕ್ಕೆ ಸೇರಬೇಕೆಂದಿದ್ದವರು ಈ ಕಳ್ಳತನವನ್ನೇಕಯ್ಯ ಮಾಡಿದಿರಿ ಎಂದು ಕೇಳಿದೆನು.

ರಾಮಾಂಜೋಯಿ- ನಾವು ಜಾತಿ ಕೆಡಬೇಕೆಂದಿರಲಿಲ್ಲ ಸ್ವಾಮಿ ಎಂದನು.

ನಿಮ್ಮ ದೇವರನ್ನು ಬಿಟ್ಟಿರಂತೆ.

ರಾಮಾಜೋಯಿ ಏನೋ ಬಿಟ್ಟೆವು. ಈ ಸಾಹೇಬರು ಹೇಳಿದರು- ನಿಮ್ಮ ದೇವರಿಗೆ ದೀಪ ಹಚ್ಚದೆ ಇದ್ದರೆ ಕತ್ತಲಲ್ಲಿರುತ್ತಾನೆ, ಗುಡಿಯ ಕಸ ಗುಡಿಸದಿದ್ದರೆ ಅವನಿಗೆ ಕಸ ಗುಡಿಸಿಕೊಳ್ಳಲು ಆಗುವುದಿಲ್ಲ ಎಂದರು. ನಮ್ಮ ದೊಡ್ಡವರು ಬೇಡ, ಹಾಗಲ್ಲ ಬಿಡಬಾರದು, ಎಂದರು. ನಾವು ಬಲವಂತ ಮಾಡಿ ಗುಡಿ ಮುಚ್ಚಿ ಬೀಗ ಹಾಕಿದೆವು. ಹತ್ತು ದಿನದ ಮೇಲೆ ಹೋಗಿ

ನೋಡಿದರೆ ಸಾಹೇಬರು ಹೇಳಿದಂತೆ ಆಗಿತ್ತು. ದೇವರ ಮೇಲೆ ಮಣ್ಣು ಹೆಂಟೆ ಕಲ್ಲು ಬಿದ್ದಿತ್ತು. ದೇವರು ಅದನ್ನು ಕೂಡ ತೆಗೆದುಹಾಕಿರಲಿಲ್ಲ. ಗುಡಿಯಿಂದ ಒಂದು ಪಾತ್ರೆಯನ್ನು ಕದ್ದೆವು! ಏನೂ ಆಗಲಿಲ್ಲ. ಅದರ ಮೇಲೆ ಈ ದೇವರಲ್ಲಿ ಶಕ್ತಿ ಸಾಲದು ಎಂದು ತಿಳಿದೆವು.

ಆ ದೇವರಿಗೆ ಶಕ್ತಿ ಸಾಲದಿದ್ದರೆ ಈ ಗುಡಿಯಲ್ಲಿ [ಚರ್ಚಿನಲ್ಲಿ] ಯಾರೆ ಕದ್ದಾರೆ.

"ಇವರ ಗುಡಿಯಲ್ಲಿ ದೇವರೇ ಇಲ್ಲ ಸ್ವಾಮಿ. ದೇವರು ಇರುವ ಕಡೆ ಹೀಗಾದರೆ ದೇವರಿಲ್ಲದ ಕಡೆ ಏನು ಹೆದರಿಕೆ ಎಂದು ನಾವು ಆ ಭಾನುವಾರ ಇವರ ಗುಡಿಯಲ್ಲಿ ಸಾಮಾನು ತೆಗೆದುಕೊಂಡೆವು.

"ಈಗ ದೇವರು ಕೊಂದರೆ ಕರಲಿಲ್ಲವೇನು?"

"ಏನೂ ಇಲ್ಲ ಸ್ವಾಮಿ. ಸಾಹೇಬರು ಹಿಡಿದುಕೊಂಡರು,
ದೇವರು ಏನು ಮಾಡುತ್ತಾನೆ? ಆ ದೇವರೂ ಸತ್ವ
ಇಲ್ಲ, ಈ ದೇವರೂ ಸತ್ವ ಇಲ್ಲ. ಈ ದೇವರ
ಸಾಮಾನು ಸಾಹೇಬರು ನೋಡಿಕೊಳ್ಳುತ್ತಾರೆ. ಆ ದೇವರ
ಸಾಮಾನು ನಮ್ಮ ಯಜಮಾನ ನೋಡಿಕೊಳ್ಳುತ್ತಾನೆ.
ಈಗ ನಾವು ಇಲ್ಲಿ ಆಗುವ ಶಿಕ್ಷೆ ಅನುಭವಿಸಿ
ಬಂದ ಮೇಲೆ ನಮ್ಮ ದೇವರಿಗೆ ತಪ್ಪು ಕಾಣಿಕೆ
ಕೊಡಬೇಕು. ನಮ್ಮ ಯಜಮಾನ ಗೊತ್ತು ಮಾಡಿದ್ದಾನೆ.'
ನಾನು ಹಿರಿ ಸಾಹೇಬರನ್ನು ಇವರಿಗೆ ರಾಮದೇವರಲ್ಲಿ
ನಂಬಿಕೆ ತಪ್ಪುವಂತೆ ಮಾಡುವುದಕ್ಕೆ ನೀವು ಹೀಗೆ
ಮಾಡಿದಿರೇನು ಎಂದು ಕೇಳಿದೆನು.
ಹೌದು, ವಿಗ್ರಹದಲ್ಲಿ ಏನೂ ಇಲ್ಲ ಎಂದು ತೋರಿಸುವುದಕ್ಕೆ

ನಾನು ಹೀಗೆ ಹೇಳಿದೆ. ಇವರು ಹುಡುಗರು, ಕೆಲವರು ಮಾಡಿ ನೋಡಿದರು. ನಾನು ಹೇಳಿದ್ದು ನಿಜವಾಯಿತು. ಆದರೆ ಆಮೇಲೆ ಪಾತ್ರೆ ಕದ್ದದ್ದು ನನಗೆ ಗೊತ್ತಿಲ್ಲ. ಮುಂದಕ್ಕೆ ಈ ಯೋಜನೆ ಮಾಡುತ್ತಾರೆ ಎಂದು ನನಗೆ ಗೊತ್ತಾಗಲಿಲ್ಲ ಎಂದು ಹೆನ್ರಿ ಸಾಹೇಬರು ಹೇಳಿದರು.

ನಾನು ರಾಮ ಮತ್ತು ಶಿಷ್ಯನನ್ನು ನಿಮಗೆ ಜೂರಾ ಜುಲ್ಮಾನೆ ಹಾಕಿದರೆ ಕೊಡುವಿರೇನು ಎಂದು ಕೇಳಿದೆನು.

"ನಮಗೆ ಆಗುವುದಿಲ್ಲ ಸ್ವಾಮಿ, ನಾವು ಬಡವರು. ಆಮೇಲೆ ನಮ್ಮ ದೇವರಿಗೆ ಕಾಣಿಕೆ ಕೊಡುವುದೇ ಸಾಕಾಗಿದೆ."

"ಹಾಗಾದರೆ ಸಾದಾ ಸಜ ಹಾಕುತ್ತೇನೆ."

"ಮಹಾಸ್ವಾಮಿ, ನಮಗೆ ಒಂದು ಕಡೆ ಸುಮ್ಮನೆ ಕುಳಿತಿರಲು ಆಗುವುದಿಲ್ಲ. ಕೆಲಸದ ಸಜಾ ಹಾಕಿ ಮಹಾಸ್ವಾಮಿ."

ಬಹಳ ಯೋಚನೆ ಮಾಡಿ ಬಹಳ ವ್ಯಸನದಿಂದ ಒಬ್ಬೊಬ್ಬನಿಗೆ ಹದಿನೈದು ದಿನ ಕಠಿಣ ಸಜ ಹಾಕಿದೆನು.

ಅನುಭವಿಸು	To experience
ಕಠಿಣ	Difficult
ಕಳಚು	Loosen
ಕಾಣಿಕೆ	Offering
ಜುಲ್ಮಾನೆ	Fine
ವ್ಯಸನ	Sorrow
ಶಿಕ್ಷೆ	Punishment
ಸಜ	Punishment
ಹೆಂಟೆ	Lump of mud
ಸಾಲದು	Not enough

ಆದ್ಯ ರಂಗಾಚಾರ್ಯ, 1904-

ರಂಗಾಚಾರ್ಯರು 1904ನೆ ಇಸವಿ ಸೆಪ್ಟೆಂಬರ್ ತಿಂಗಳು 25ನೆ ತಾರೀಖು ಬಿಜಾಪುರ ಜಿಲ್ಲೆಯಲ್ಲಿರುವ ಅಗರಖೇಡದಲ್ಲಿ ಹುಟ್ಟಿದರು. ಅವರ ತಂದೆ ವಾಸೂ ಮಾಸ್ತರರು ಅಗರಖೇಡದ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಅವರದು ಪಂಡಿತರ ಮನೆತನ.

ಪಂಡಿತ ಮನೆತನದಲ್ಲಿ ಹುಟ್ಟಿದುದರಿಂದ ರಂಗಾಚಾರ್ಯರಿಗೆ ಸಂಸ್ಕಾರ ಇ ಜ್ಞಾನ ಚಿಕ್ಕವರಾಗಿರುವಾಗಲೇ ಬಂತು. ಮ್ಯಾಟ್ರಿಕ್ ಪರೀಕ್ಷೆ ಪಾಸಾದ ಮೇಲೆ ಅವರು ಪುಣೆಯ ಡೆಕ್ಕನ್ ಕಾಲೇಜನ್ನು ಸೇರಿದರು. ಅಲ್ಲಿ ಓದುತ್ತಿದ್ದಾಗ ಇದೇ ಸಂಸಾರ, ಕನ್ನಡ ಶಾಮ ಎಂಬ ಎರಡು ನಾಟಕಗಳನ್ನು ಬರೆದರು.

1925ರ ಬಿ.ಎ. ಪರೀಕ್ಷೆಯಲ್ಲಿ ರಂಗಾಚಾರ್ಯರು ಮೊದಲನೆ ಸ್ಥಾನ ಪಡೆದರು. ಅವರ ತಂದೆ ಸಾಲ ಮಾಡಿ ಇಂಗ್ಲೆಂಡಿಗೆ ಕಳುಹಿಸಿದರು. ಅಲ್ಲಿ ಮಗ ಐ.ಎ.ಎಸ್. ಮತ್ತು ಬ್ಯಾರಿಸ್ಟರ್ ಪರೀಕ್ಷೆಗಳಿಗೆ ಓದಬೇಕೆಂದು ಅವರ ಆಸೆ. ಆದರೆ ಇಂಗ್ಲೆಂಡಿಗೆ ಹೋದ ಮೇಲೆ ರಂಗಾಚಾರ್ಯರಿಗೆ ತಮಗೆ ಐ.ಎ.ಎಸ್. ಮತ್ತು ಬ್ಯಾರಿಸ್ಟರ್ ಪರೀಕ್ಷೆ ಪಾಸು ಮಾಡುವುದರಲ್ಲಿ ಆಸೆಯಿಲ್ಲ ಎಂದು ತಿಳಿಯಿತು. ಆದ್ದರಿಂದ ಭಾಷಾಶಾಸ್ತ್ರದಲ್ಲಿ ಎಂ.ಎ. ಡಿಗ್ರಿ ಪಡೆದು 1928ರಲ್ಲಿ ಇಂಡಿಯಾಕ್ಕೆ ಹಿಂತಿರುಗಿದರು.

ಇಂಡಿಯಾಕ್ಕೆ ಬಂದ ಕೂಡಲೆ ರಂಗಾಚಾರ್ಯರಿಗೆ ಕೆಲಸ ಸಿಕ್ಕಲಿಲ್ಲ. ಕೆಲಸ ಹುಡುಕಿಕೊಂಡು ಬೊಂಬಾಯಿಗೆ ಹೋದರು. ಅಲ್ಲಿ 1929ರಲ್ಲಿ ಉದರ ವೈರಾಗ್ಯ ಎಂಬ

ನಾಟಕ ಬರೆದರು. ಅದರಲ್ಲಿ ಬ್ರಾಹ್ಮಣ ಸಮಾಜದ ಹುಳುಕುಗಳನ್ನು ಎತ್ತಿ ತೋರಿಸಲು ಪ್ರಯತ್ನಿಸಿದರು. ಅದೇ ಸಮಯದಲ್ಲಿ ಸೂಳೆಗಾರಿಕೆಯ ಬಗ್ಗೆ ವಿರಾಟ ಪುರುಷ ಮುಕ್ತಣ್ಣ ಎಂಬ ನಾಟಕವನ್ನು ಬರೆದರು.

ರಂಗಾಚಾರ್ಯರು 1930ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿ ನೇಮಕ ಹೊಂದಿದರು. ಅಲ್ಲಿ ಬರೆದ ವೈದ್ಯರಾಜ, ದರಿದ್ರ ನಾರಾಯಣ ನಾಟಕಗಳಲ್ಲಿ ರಂಗಾಚಾರ್ಯರ ವಿಡಂಬನೆ ಬೆಳಗತೊಡಗಿತು. 1933ರಲ್ಲಿ ಬ್ರಾಹ್ಮಣ ಸಮಾಜದ ಬಗ್ಗೆ ಹರಿಜನ್ವಾರ ನಾಟಕ ಬರೆದರು.

1934ರಲ್ಲಿ ರಂಗಾಚಾರ್ಯರು ಶ್ರೀಶೆಂಯ ಚೆಂದ್ರ ಜೋಡರ ಮಗಳು ಶಾರದಾ ದೇವಿಯನ್ನು ಮದುವೆಯಾದರು. ಕರ್ನಾಟಕ ಕಾಲೇಜನ್ನು ಬಿಟ್ಟು ಕೆಲವು ವರ್ಷಗಳು ಆಕಾಶವಾಣಿಯ ಬೆಂಗಳೂರು ಕೇಂದ್ರದಲ್ಲಿ ಕೆಲಸ ಮಾಡಿದರು.

ಸುಮಾರು ಎಪ್ಪತ್ತು ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ನಾಟಕಗಳು ಹೆಚ್ಚು.

ರಂಗಾಚಾರ್ಯರ ನಾಟಕಗಳಲ್ಲಿ ಅನೇಕವು ವಿಡಂಬನೆಗಳು. ಅವರು ನಾಟಕ ಬರೆಯಲು ಪ್ರಾರಂಭಿಸಿದಾಗ ಕನ್ನಡದಲ್ಲಿ ಹೆಚ್ಚು ಸಾಮಾಜಿಕ ನಾಟಕಗಳು ಇರಲಿಲ್ಲ. ರಂಗಾಚಾರ್ಯರ ಮೇಲೆ ಜಾರ್ಜ್ ಬರ್ನಾರ್ಡ್ ಶಾನ ಪ್ರಭಾವ ಹೆಚ್ಚು ಬಿದ್ದಿದೆ. ಶಾನ ನಾಟಕಗಳಂತೆ ರಂಗಾಚಾರ್ಯರ ನಾಟಕಗಳಲ್ಲಿ ಮಾತಿನ ಚುರುಕು, ಸಮಾಜದ ಹುಳುಕುಗಳನ್ನು ತೋರಿಸುವ ಆತುರ ಕಂಡು ಬರುತ್ತದೆ. ಸಮಾಜ ಬದಲಾಯಿಸಿದಂತೆ ನಾಟಕಗಳ ಮುಖ್ಯತೆ ಕೂಡ ಕಡಿಮೆ ಯಾಗುತ್ತದೆ.

ರಂಗಾಚಾರ್ಯರು ನಾಟಕಗಳ ಜೊತೆಗೆ ಕವನಗಳು ಮತ್ತು ಕಾದಂಬರಿಗಳನ್ನು ಕೂಡ ಬರೆದಿದ್ದಾರೆ. ಅವರ ಮುಖ್ಯ ಕಾದಂಬರಿಗಳು ವಿಶ್ವಾಮಿತ್ರ ಸೃಷ್ಟಿ, ಪ್ರೇಯಸಿ, ಪುರುಷ.

ರಂಗಾಚಾರ್ಯರ ಮುಖ್ಯ ಗುಣಗಳು ಎಷ್ಟು ಅಪ್ರಿಯವಾದರೂ ತಮಗೆ ಸತ್ಯ ಎನಿಸಿದ್ದನ್ನು ಹೇಳುವ ಹಠ, ಯಾರಿಗೆ ಹೆದರದ ಧೈರ್ಯ. ನಾಟಕ ಮತ್ತು ಕಾದಂಬರಿಗಳಲ್ಲಿ ಹೊಸ ತಂತ್ರಗಳನ್ನು ಉಪಯೋಗಿಸಿದ್ದಾರೆ.

ರಂಗಾಚಾರ್ಯರಿಗೆ ಆರ್. ವಿ. ಜಹಗೀರದಾರ ಎಂದು ಪೂರ್ಣ ಹೆಸರಿದೆ. ಶ್ರೀರಂಗ ಅವರ ಕಾವ್ಯನಾಮ.

ಆಕಾಶವಾಣಿ	Voice in the air, radio.
ಆತುರ	Haste
ಕಾವ್ಯನಾಮ	Pen name
ಚುರುಕು	Sharp
ಟೀಕೆ	Criticism
ಧೈರ್ಯ	Courage
ಒಗ್ಗಸು	Get acclamatised.
ಭಾಷಾ ಶಾಸ್ತ್ರ	Science of languages.
ವಿಡಂಬನೆ	Satire
ಸೂಳೆಗಾರಿಕೆ	Prostitution
ಹುಳುಕು	Defect
ಹಠ	Stubbornness

ಅನಾದಿ ಅನಂತ   ಆದ್ಯ ರಂಗಾಚಾರ್ಯ.

(ಆಧಾರ)   ಪುಟ 142-143

"ಮನೀ ವಳ್ಗ ಮಕ್ಕಳಿದ್ದರ ಚಂದ" ಎನ್ನುತ್ತಿದ್ದಳು ಸರಳೆ. ರಾಮಣ್ಣನಿಗೆ ಗೊತ್ತು, ಅವನೆಂದಿಗೂ[1] ಮರೆಯುವಂತಿಲ್ಲ ಇಂತಹ ಸಂದರ್ಭಗಳನ್ನು.

"ಮನೀ ವಳ್ಗ ಮಕ್ಕಳಿಲ್ಲದಿದ್ದರ ಮನೀ ಭಣ ಭಣ ಅನ್ನೋದು[2]" ಎನ್ನುವಳು.

"ಮಕ್ಕಳನ್ನು ಹಡೆಯೋದಕ್ಕೆ[3] ಹೆಂಡತಿ ಬೇಕಲ್ಲ? ಅದಕ್ಕೇ ನಾನು ಹೆಂಡತಿಯ ಆರೋಗ್ಯದ ಜೋಪಾನ ಮಾಡ್ತೀನಿ" ಎಂದು ರಾಮಣ್ಣನ ಉತ್ತರ.

[1] ಅವನು + ಎಂದಿಗೂ. ಎಂದಿಗೂ = ಯಾವಾಗಲೂ

[2] ಅನ್ನೋದು = ಅಂತದೆ

[3] ಹಡೆಯೋದಕ್ಕೆ = ಹಡೆಯಲಿಕ್ಕೆ

"ಇಂದೋ ನಾಳೆಯೋ ಸಾಯುವ ನನ್ನಂತಹ ಹೆಂಡ್ತೀನ್ನ ಕಟ್ಟಿಕೊಂಡು ಏನ್ಮಾಡ್ತೀರಿ?"

"ನನ್ನ ಹೆಂಡ್ತಿ ಹ್ಯಾಗಿರಬೇಕು ಅನ್ನೋ[1] ವಿಚಾರ ನನ್ನದು."

"ನನ್ನಂತಹ ಹೆಂಡ್ತಿ ಇದ್ದರ ಬರೀ ವಿಚಾರದೊಳಗೇ ಬಳೀಶಾಳ ಆ?"

"ಛೀ, ಹುಚ್ಚಿ, ಸರಲಾ, ನೀನು! ಒಂದು ನಾಲ್ಕು ದಿನ ಕಾಯಿಲೆ ಬಿದ್ದರೆ ಸುಧಾರಿಸುವುದೇ ಇಲ್ಲ ಅಂತ ತಿಳಿದಿರುವೆ ಏನು?"

"ಇಲ್ಲದ ಆಶಾ ಇಟ್ಟುಕೊಳ್ಳಬ್ಯಾಡಿರಿ ನೀವು. ಅದಕ್ಕೇ ಹೇಳ್ತೀನಿ, ನಾನು ಸಾಯೋದ್ರೊಳಗೆ ನೀವು ಇನ್ನೊಂದು ಮದುವೆ ಮಾಡಿಕೊಂಡು - ಮನೀ ಮಕ್ಕಳು ಎಲ್ಲ ಸುಖ ಪಡೆಯೋದನ್ನ ನೋಡ್ಬೇಕು ಅಂತ ನನ್ನ ಹಂಬಲ."

1. ಅನ್ನೋ = ಅನ್ನುವ = ಎಂಬ

"ಛಿಛಿ! ನಿನ್ನ ಗಂಡ ಅಂದ್ರೆ ಬೇಕಾದ ಹೆಣ್ಣು

ಬಲಿಯೋ ಸುಕುವಿ ಅಂತ ತಿಳಿದೀಯೋ ಏನು?

ಇಲ್ಲಾ. ನಿನ್ನ ಇಲ್ಲಿಯೆ ಬಿಟ್ಟು ನಾನು ಕನ್ಯಾ

ಹುಡುಗಿಯನ್ನ ಕಟ್ಕೊಂಡೀಯೋ?"

"ಯಾರು ಬಲಿಯಾಗೋದೂ ಬ್ಯಾಡ, ಯಾರು ಹುಡುಕೋದೂ

ಬ್ಯಾಡ. ನಮ್ಮ ಕುಮುದ ಇದ್ದಾಳೆ—"

"ಪಾಪ! ಆ ಹುಡುಗೀ ಆಹುತಿಯಾಗಬೇಕೆ?"

"ಇಶ್ಶ! ಏನಾದ್ರೂ ಮಾತಾಡಬ್ಯಾಡ್ರಿ. ಆಕೀಗ

18 ವಯಸ್ಸು. ನೀವು, ನಿಮ್ಮ ಪುಸ್ತಕ ಅಂದ್ರ

ಆಕೀಗೆ ಎಷ್ಟು ಅಭಿಮಾನ?"

"ಅದರ ಲಾಭ ಪಡೆದುಕೊಂಡು ಬಿಡು ಅಂತ

ಹೇಳ್ತೀಯೇನು" ಎಂದು ರಾಮಣ್ಣ ತನ್ನ ಪಾಡಿಗಾಗಿ ತಾನೇ ನಕ್ಕಿದ್ದ. ಸರಳೆ ಕಾಲವಾದಳು. ಕುಮುದಳನ್ನು ತಾನು ಮದುವೆಯಾದ, ಮಗನೂ ಹುಟ್ಟಿದ. ಆದರೆ ಅದನ್ನು ನೋಡಲು ಸರಳೆ ಜೀವಿಸಿರಲಿಲ್ಲ...

ರಾಮಣ್ಣ ಕುಳಿತಿದ್ದ ಜಾಗದಿಂದ ಎದುರು ಗೋಡೆಯನ್ನು ನೋಡಿದ. ಸರಳೆಯ ಚಿತ್ರ ತೂಗುತ್ತಿದೆ. ದಿಟ್ಟಿಸಿ ನೋಡಿದ. ತಟ್ಟನೆ ಸೆಟೆದು ಪುಳಕ ಗೊಂಡ.

ಸರಳೆ ಜೀವಿಸಿದ್ದಾಳೆ! ತನ್ನ ಸಂಸಾರವನ್ನು ನೋಡುತ್ತಿದ್ದಾಳೆ! ಅದಕ್ಕಾಗಿಯೆ ಮೋಹನನ ಕಣ್ಣುಗಳು ಸರಳೆಯ ಕಣ್ಣುಗಳ ಹಾಗಿವೆ. ತನ್ನ ಸಂಸಾರವನ್ನು ನೋಡಲೇ ಬೇಕು ಎಂಬ ಹಟಕ್ಕಾಗಿ ಸರಳೆಯ ಕಣ್ಣುಗಳು ಆಕೆಯ ದೇಹದೊಡನೆ[1] ನಾಶವಾಗಲಿಲ್ಲ, ಉಳಿದು ಕೊಂಡಿವೆ,

[1] ದೇಹದ + ಒಡನೆ. ಒಡನೆ = ಜೊತೆ

ತನ್ನ ಜೀವನವನ್ನು ನೋಡುತ್ತಿವೆ! ರಾಮಣ್ಣನಿಗೆ ಭಯವಾಯಿತು, ಅವನ ಮೈ ನಡುಗಿತು... ಈ ಹತ್ತು ವರುಷಗಳ ತನ್ನ ಎಲ್ಲ ಅನುಭವವನ್ನು ಆ ಕಣ್ಣುಗಳು ನೋಡಿರಬಹುದೆ?[1]

ಶ್ಯಾ - ಎಂದ ರಾಮಣ್ಣ.

ಹೊರಗಿನಿಂದ ಹಾರಿಬಂದು ಗುಬ್ಬಿಯೊಂದು ಕರತೆಂಪು ಚಿತ್ರದ ಮೇಲೆ ಕುಳಿತಿತ್ತು.

ಶ್ಯಾ - ಎಂದ ನಿಟ್ಟನಿಂದ.

ಗುಬ್ಬಿ ಹಾರಿತು. ರಾಮಣ್ಣನ ಮನಸ್ಸಿನೊಳಗಿನ ವಿಚಾರವೂ ಹಾರಿತು. ಥಟ್ಟನೆ ಕುರ್ಚಿಯಿಂದೆದ್ದು ಅವಸರವಾಗಿ ಕಿಟಿಕಿಯ ಹತ್ತಿರ ಬಂದ. ಕೈ ಗಡಿಯಾರವನ್ನು ನೋಡಿಕೊಂಡ.

[1] ನೋಡಿರಬಹುದೆ = ನೋಡಿರಬಹುದೇನು?

ಅನಂತ	Without end.
ಅನಾದಿ	Without beginning
ಅವಸರ	Haste
ಆಸೆ	Desire
ಆಹುತಿ	Sacrifice
ಒಲ	To love
ಕನ್ಯೆ	Bride
ಗುಬ್ಬಿ	Sparrow
ಚಟ್ಟನೆ	Quickly
ಜೋಪಾನ	Care
ಭಣ ಭಣ	Empty feeling
ವಳ್ಗ	In
ಸುರೂಪಿ	Beautiful
ಹಡಿ	To give birth
ಹಂಬಲ	Desire
ನೆಟೆದು	Straight
ದಿಟ್ಟಿಸು	Stare

ಪುರುಷ   ಆದ್ಯ ರಂಗಾಚಾರ್ಯ

ಪುಟ 112- 113

ಭರಮನಿಗೆ ಸಿಟ್ಟು ತಂದೆಯ ಮೇಲೆ. ತಂದೆ ಮಾಡಿದ ತಪ್ಪಿಗಾಗಿ ತಾನು ಈಗ ಅನುಭವಿಸಬೇಕಾಗಿದೆ;[1] ತಪ್ಪನ್ನು ತಿದ್ದಿಕೊಳ್ಳುವುದೂ ಶಕ್ಯವಲ್ಲ. ಭರಮನಿಗೆ ತಂದೆಗಾಗಿ ಅಸಹ್ಯ, ಅವನ ದಡ್ಡತನಕ್ಕಾಗಿ ತಿರಸ್ಕಾರವೂ ಇದ್ದಿತು. ಯಾಕೆ ಹಾಗೆ ಮಾಡಬೇಕಿತ್ತು? ಜಾತಿ, ಜಾತಿ! 'ಹರಿಜನ' ಅಂತೆ? ಅಂದರೂ ಮೊದಲಿನಂತೆ 'ಅಸ್ಪೃಶ್ಯ' ಅಲ್ಲವೆ? ಶಾಲೆಗೆ ಹೆಸರನ್ನು ಹಾಕುವಾಗಲೆ ದಡ್ಡತನವಾಯಿತು, ಹರಿಜನ ಜಾತಿ ಎಂದು ಹೇಳಿ.

"ಅದನ್ನು ಯಾಕೆ ಹೇಳಬೇಕಿತ್ತು?" ಎಂದು ತಂದೆಯನ್ನು ಎಷ್ಟೋ ಸಲ ಕೇಳಿದ. ಮೊದಲ ಸಲ ಕೇಳಿದಾಗ ಕಾಳಪ್ಪ[2]ನಿಗೆ ಆಶ್ಚರ್ಯವಾಗಿತ್ತು, ಪ್ರಶ್ನವೆ ತಿಳಿದಿರಲಿಲ್ಲ.

[1] ಭರಮನನ್ನು ಶಾಲೆಗೆ ಸೇರಿಸಿದಾಗ ಅವನ ತಂದೆ ತನ್ನ ಜಾತಿ 'ಹರಿಜನ' ಎಂದು ಹೇಳಿದ.

[2] ಕಾಳಪ್ಪ. ಭರಮನ ತಂದೆ.

"ಅದನ್ಯಾಕ್ಹೇಳ್ಬೇಕಿತ್ತಂದ್ರ?"[1]

"ನಮ್ಮ ಜಾತಿ ಇದು ಅಂತ."

"ಯಾಕೀದ್ರ? ಕೇಳ್ದ್ಯಾ, ಹೇಳ್ದೆ."

"ನಿನಗ್ಯಾರು ಗುರುತಿತ್ತ ಇಲ್ಲ?"

"ಗುರುತೆ? ಇಲ್ಲ ಯಾರ್ಗು ಗುರ್ತಿರ್ತದ? ಇದೇನು ನಮ್ಮೂರ? ನಂ ದೇಶ?"

"ಅದ್ಕೇ ಅಂತೀನಿ. ಮತ್ತೊಂದು ಹೆಸರು ಹೇಳ್ದ್ರ ನಡೀತಿದ್ದಿಲ್ಲ!"

"ಮತ್ತೊಂದು ಹೆಸರು? ಅಂದ್ರ? ಮುಂಬಯಿಗೆ ಬಂದ್ರ ನಂ ಜಾತಿ ಬದಲಾಗ್ತದ ಅಂತ ತಿಳಿದಿದ್ದೀನು ಹುಡುಗ? ಅದನ್ಯಾಕಂತಿ? ಹಂ- ಹಂ- ಅಂದ್ರ ಹೊಲೇರು ಅಂತ ಮದ್ಲಿನ ಹೆಸರು ಹೇಳ್ಬೇಕಿತ್ತೇನ? ಯಾಕಂದ್ರೇನು? ಈಗ ಹರಿಜನ ಅನ್ನೋ ಹೆಸರೇ ಕಾಯಿದೇದಿಂದ ಹೊತ್ತ್ಯಾಗದ."

---

[1] ಅದನ್ನು + ಯಾಕೆ + ಹೇಳಬೇಕಿತ್ತು + ಅಂತ + ಅಂದರ

"ಹರಿಜನ ಅಂತೆ! ಅಂದ್ರೇನು? ಅದೇ ಹೊಲೇರಲ್ಲ?"

"ಅದೇ? ಅದೇ ಅಂದ್ರ ಯಾವಪ್ಪ?"

ತಂದೆಯ ದಡ್ಡತನಕ್ಕೆ ಬೇಸತ್ತು ಭರಮ ಹೊರಟು ಹೋಗಿದ್ದ: ಅನೇಕರ ಸಲಹೆ ಪಡೆದು 'ಬಿ. ಕೆ. ಹೊಲೆಯರ' ಎಂಬ ಹೆಸರನ್ನು 'ಎಚ್. ಕೆ. ಭರಮಪ್ಪ' ಎಂದು ಬದಲಾಯಿಸಿಕೊಂಡ. 'ಎಚ್' ಎಂದರೆ Harijan ಎಂದು ಹೇಳಿದ ತಂದೆಗೆ. ಎಚ್ ಎಂದರೆ Holeya ಎಂದೂ ಆಗಬಹುದು.

ಹೆಸರು ಬದಲಾಯಿಸಿದ್ದಕ್ಕೆ ಪರಿಸ್ಥಿತಿ ಬದಲಾಯಿಸಲಿಲ್ಲ, ಅನುಭವ ಬದಲಾಯಿಸಲಿಲ್ಲ. ಎಲ್ಲರಿಗೂ ತಾನೊಂದು ವಿಚಿತ್ರ ವಸ್ತು. ಒಳ್ಳೆಯ ಕೆಲಸ ಮಾಡಿದರೆ 'ನೋಡಿರಿ, ಹುಡುಗ ಹರಿಜನ, ಆದ್ರೂ ಹ್ಯಾಗೆ ಚುರುಕು ಇದ್ದಾನೆ' ಎನ್ನುವರು. ಒಂದು ಸಲ ತಪ್ಪು ಕೆಲಸ ಮಾಡಿದರೆ "ಸೊಕ್ಕೇ ಇತ್ತು. ಹರಿಜನ ಅಂದ ಮಾತ್ರಕ್ಕೆ ರಕ್ತದ ಬಣ್ಣ

ಬದಲಾಗ್ತದ?[1] ಜಾತಿಯ ಗುಣ ಎಲ್ಲಿ ಹೋಗ್ತೇತ?" ಎನ್ನುವರು. ಅಂತೂ ಯಾವುದಕ್ಕೂ ತಾನು ಹರಿಜನ ಎನ್ನುವುದನ್ನು ಜನ ಮರೆಯುತ್ತಿರಲಿಲ್ಲ. ತನಗೂ ಮರೆಯುವ ಅವಕಾಶ ಸಿಗುತ್ತಿರಲಿಲ್ಲ.

"ಇಷ್ಟು ತಿಳೀಬಾರ್ದಾಗಿತ್ತ ನಿನಗ- ಜಾತಿಯ ಹೆಸರು ಹೇಳಿದರೆ ಕೆಲಸ ಸಿಗ್ತದೆ ಅಂತ?" - ತಂದೆಯನ್ನು ಕೇಳಿದಳು.

"ಜಾತಿ ಹೆಸರು ಹೇಳಿದ್ದಕ್ಕೆ ನಿನಗೆ ಈ ಕಾಲರಶಿಪ್ಪು ಸಿಕ್ಕಿದ್ದು? ಮರೆತ್ಬಿಟ್ಟೆಯೋ? ಎಂದಿದ್ದ ತಂದೆ.

ಅದು ನಿಜ, ತಾನು ಹರಿಜನ ಎಂದು ತನಗೆ ಸಹಾಯ ಸಿಕ್ಕಿತು, ಕಲಿಯುವುದು ಶಕ್ಯವಾಯಿತು. ನಿಜ, ತಂದೆಯ ಮಾತು ನಿಜ ಎಂದು ತಿಳಿದಾಗ ಹೆಚ್ಚು ಸಿಟ್ಟು ಬಂತು ಭೀಮನಿಗೆ.

---

1. = ಜಾತಿಯ ಹೆಸರು ಬದಲಾಯಿಸಿದರೆ ಆ ಜಾತಿಯಲ್ಲಿ ಹುಟ್ಟಿದ ಮನುಷ್ಯನ ಗುಣ ಬದಲಾಯಿಸುವುದಿಲ್ಲ.

ಅಸಹ್ಯ	Disgust
ಅಸ್ಪೃಶ್ಯ	Untouchable
ಕಾಯಿದೆ	Law
ತಿರಸ್ಕಾರ	Defiance and contempt.
ದಡ್ಡತನ	Stupidity, folly.
ಬೇಸತ್ತು	Tired
ಮುನ್ನಿನ	Former
ಕಾಲರಶಿಪ್ಪು	Scholarship
ಶಕ್ಯ	Possible
ವಿಚಿತ್ರ	Strange, peculiar

ಎನ್. ಕಸ್ತೂರಿ

ಕಸ್ತೂರಿಯವರು ಕೇರಳದವರು. ಅವರ ಮನೆ ಮಾತು ತಮಿಳು. 1930 ರ ಸುಮಾರಿಗೆ ಮೈಸೂರಿಗೆ ಬಂದರು. ಆಗ ಅವರಿಗೆ ಕನ್ನಡ ಬರುತ್ತಿರಲಿಲ್ಲ. ಕ್ರಮೇಣ ಕನ್ನಡ ಕಲಿತು ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದರು.

ಅವರ ಮೊದಲನೆಯ ಪುಸ್ತಕ ಪಾತಾಳದಲ್ಲಿ ಪಾಪಚ್ಚಿ. ಅದು Alice in Wonderland ನ ಅನುವಾದ. ಆಮೇಲೆ ಅನೇಕ ನಾಟಕಗಳು ಮತ್ತು ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಹಾಸ್ಯ ಮುಖ್ಯ. ಬಹಳ ಕಾಲ ಅವರ ನಾಟಕಗಳು ಜನಪ್ರಿಯವಾಗಿದ್ದುವು. ಅವುಗಳಲ್ಲಿ ಗಗ್ಗಯ್ಯನ ಗಡಿಬಿಡಿ, ಕಾಡಾನೆ, ವರದಕ್ಷಿಣೆ, ಚಿತ್ರ ವಿಚಿತ್ರ ಇವು ಕೆಲವು. ಅವರು ಕನ್ನಡದಲ್ಲಿ ನಾಟಕ

ಬರೆಯಲು ಪ್ರಾರಂಭಿಸಿದ ಕಾಲದಲ್ಲಿ ಕನ್ನಡದಲ್ಲಿ ಹೆಚ್ಚು ನಾಟಕಗಳಿರಲಿಲ್ಲ. ಅವರ ನಾಟಕಗಳು ಜನಪ್ರಿಯವಾದುದರಿಂದ ಎ. ಆರ್. ಕೃಷ್ಣಶಾಸ್ತ್ರಿಗಳು ಅವರನ್ನು "ನಾಟಕದ ಕಸ್ತೂರಿ" ಎಂದು ಕರೆದರು.

ಕಸ್ತೂರಿಯವರು ಸಣ್ಣ ಪಟ್ಟಣಗಳ ಅಧಿಕಾರಿಗಳು, ಆಫೀಸ್ ಗುಮಾಸ್ತೆಗಳು, ಜವಾನರು - ಇವರ ಭಾಷೆಯನ್ನು ತಮ್ಮ ಪುಸ್ತಕಗಳಲ್ಲಿ ಉಪಯೋಗಿಸುತ್ತಾರೆ. ಒಳ್ಳೆಯ ಮನೋರಂಜನಾ ಸಾಹಿತ್ಯವನ್ನು ಒದಗಿಸಿದ್ದಾರೆ. ಹದಿನೈದಕ್ಕೆ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ.

ಒದಗಿಸು	To supply
ಕ್ರಮೇಣ	Gradually
ಗಡಿಬಿಡಿ	Hurly burly
ಚಿತ್ರ ವಿಚಿತ್ರ	Strange things.
ಜನ ಪ್ರಿಯ	Popular
ಪಾತಾಳ	Nether world
ಮನೆ ಮಾತು	Mother tongue
ಮನೋರಂಜನೆ	Entertainment
ವರ ಪರೀಕ್ಷೆ	Interview with bridegroom.
ಹಾಸ್ಯ	Humour

ಗೃಹದಾರಣ್ಯಕ . ನಾ. ಕಸ್ತೂರಿ.

ಪುಟ. 37-38

ಸೋಮಯ್ಯನ ತಾಯಿಂತುದು ಇದೊಂದು ಕೆಟ್ಟ ಬಾಳು. ತನ್ನ ಕಡೆ ಗಂಡನ ಅಥವ ಮಗನ ಗಮನವನ್ನು ಸೆಳೆಯಬೇಕೆಂದು ತೀವ್ರ ಹಂಬಲ ಉಂಟಾದಾಗ ಅವಳು ನೆಟ್ಟಗೆ ತನ್ನ ಕೋಣೆಗೆ ಹೋಗಿ, ತನ್ನ ಹಾಸಿಗೆ ಮೇಲೆ ಹೊರಳುತ್ತ, "ಹೋ" ಎಂದು ಅರಚಿ, "ನನಗೆ ಜ್ವರ! ಮೈ ಕೈ ನೋವು! ಬೆನ್ನು ಉಳುಕಿದೆ! ಹೊಟ್ಟೆ ಕಿವುಚುತ್ತದೆ! ತಲೆ ಸಿಡೀತಿದೆ! ನಾಲಗೆ ಒಣಗಿದೆ! ನಾನು ಸತ್ತೆ! ನನಗೆ ಯಾರೂ ಒಂದು ತೊಟ್ಟು ನೀರೂ ಕೊಡುವವರಿಲ್ಲ. ಎಲ್ಲರೂ ಎಲ್ಲಿ ಹೋಡೀತಾರೆ! ನಗ ನಗ ಹಟೀತಾರೆ... ನಗುತ್ತಾರೆ, ನಾನು ಸತ್ತರೆ ಎಲ್ಲರಿಗೂ ಸಮಾಧಾನ" ಎಂದು ಒಂದೇ ಸಮನೆ ಗಟ್ಟಿಯಾಗಿ

ಹೀಗೆ ಹೇಳುವವಳು, ಮನೆಯನ್ನು ಹೋಳು ಮಾಡುವವಳು.

ಇಂತಹ ಬಿಕ್ಕಟ್ಟಿನ ಪರಿಸ್ಥಿತಿ ವಾರಕ್ಕೊಂದಾವರ್ತಿಯಾದರೂ ಆ ಬಂಗಲೆಯಲ್ಲಿ ಉದ್ಭವಿಸುತ್ತಿತ್ತು. ಆಗ, ಸಾಹುಕಾರರು ಮನೆಯಲ್ಲಿದ್ದರೆ, ಅವರು ಒಂದೇ ಉಪಾಯ ಬಲ್ಲರು, ಅದನ್ನೇ ಉಪಯೋಗಿಸುವರು. "ಛೇ! ಸುಮ್ಮನಿರೇ! ಹೀಗಬೇಡ! ಹೀಗಾದರೆ ಜ್ವರ ಜಾಸ್ತಿಯಾಗ್ತದೆ! ಹೊರಳಬೇಡ! ಹೊರಳಿದರೆ ಬೆನ್ನೆಲುಬು ಮುರಿದೇ ಹೋಗ್ತದೆ!..." ಎಂದು ಅವಳ ಹತ್ತಿರ ಕುಳಿತು ಅವಳ ಮುಂಗೈ ಸವರುವುದು. "ಹೀಗಾದರೆ ಗಂಟಲು ಒಡೆಯುತ್ತದೆ... ಮೆಲ್ಲಗೆ ಹೇಳು... ನಿಧಾನವಾಗಿ ಹೇಳು... ಅರ್ಧ ಶ್ರುತಿಯಲ್ಲಿ ಅರಚು.. ಕೀಚಲು ದನಿಯಲ್ಲಿ ಕಿರಿಚು...' ಎಂದು ಅವರು ತಗ್ಗಿನಲ್ಲೇ ಆಕೆಯ ಕೋಪವನ್ನು ಬಗ್ಗಿಸಲು ಯತ್ನಿಸುವರು.

ಈ ರೀತಿಯ ಶುಶ್ರೂಷೆಯಿಂದ ಆಕೆ ಇನ್ನೂ ಇಮ್ಮಡಿಯಾಗಿ, ತುಳಿದ ಹಾವಿನಂತೆ, ಕೆರಳುವುದೇ ಸಂಭವ. "ಜ್ವರ ಜಾಸ್ತಿಯಾಗಲಿ, ಗಂಟಲು ಒಡೆದೇ ಹೋಗಲಿ, ಕೂಗೇ ಕೂಗುತ್ತೇನೆ, ನಾನು ಯಾರಿಗೋಸ್ಕರ ಬದುಕಬೇಕು? ನಿಮಗೋಸ್ಕರವೇ? ನಿಮಗೆ ನಾನು ಇದ್ದರೇನು? ಹೋದರೇನು? ಮಗನಿಗೋಸ್ಕರ ಬದುಕಬೇಕೇ? ಅವಗೆ ಆ ಲಂಕಿಣಿ ದೊರಕಿದಾಳಲ್ಲಾ... ಅವನಾಯಿತು ಅವಳಾಯಿತು[1]; ಮೂರು ಹೊತ್ತೂ ಲಲ್ಲೆಯಾಯಿತು, ಲಂಗಿಲ್ಲ ಲಗಾಮಿಲ್ಲ.... ಹೊರಳಾಡುತ್ತೇನೆ, ಬೆನ್ನು ಮುರಿದೇ ಹೋಗಲಿ... ಆಗಲಾದರೂ ಈ ಪ್ರಾಣ ಹಾರುತ್ತೋ ನೋಡೋಣ... ನಾನು ಹೋದ ಮೇಲೆ ನೀವೆಲ್ಲ ಸುಖವಾಗಿರಬಹುದು..." ಎಂದು ರಂಪ ಎಬ್ಬಿಸುವಳು. ಸೂರನ್ನೇ ಬೀಳಿಸಲು ಯತ್ನಿಸುವಳು.

[1] They are preoccupied with each other.

ಆದರೆ, ಠಾಕೂರರು ಊರಲ್ಲಿಲ್ಲದಿದ್ದಾಗ, ಆಗೀಗ ಹೇಳದ ದೆವ್ವ ಬಡಿದು "ಜ್ವರ" ಬಂದರೆ, ಸೋಮಯ್ಯನೂ ರಾಜಲಕ್ಷ್ಮಿಯೂ ಆ ಜ್ವರವನ್ನು ನಿಜವೆಂದೇ ಸಾಧಿಸಿ, ಅಸ್ತ್ರ ಎಂದು, ಅವಳಿಗೆ ಬಗೆಬಗೆಯಾಗಿ ಶುಶ್ರೂಷೆ ಮಾಡುವರು. ನಾಲ್ಕಾರು ದಿನಗಳವರೆಗೆ ಆ ಮಹಾರಾಣಿ ಹಾಸಿಗೆಯಲ್ಲಿ ಬಿದ್ದೇ ಇರುವಳು. ಎಂಥ ಹಟ ಆಕೆಯದು? ಡಾಕ್ಟರುಗಳು ಒಬ್ಬರಾದ ಮೇಲೆ ಒಬ್ಬರು ಬಂದು, ಆಕೆಯ ಕೈ ಹಿಡಿದು, ನಾಡಿ ಎಣಿಸಿ, ಆಕೆಯ ಆ ಭಯಂಕರ ನಾಲಗೆಯನ್ನು ನೀಡಿಸಿ ನೋಡಿ, ತಮ್ಮ ಮೂಗಿನ ಮೇಲೆ ಬೆರಳಾಡಿಸುವರು. ಕಣ್ಣು ರೆಪ್ಪೆಗಳನ್ನಗಲಿಸಿ, ಉರಿಯುವ ಕೆಂಡಗಳಂತಿರುವ ಆ ಕಣ್ಣುಗುಡ್ಡೆಗಳನ್ನು ಪರೀಕ್ಷಿಸುವರು.

ಎಲ್ಲವೂ ಬರಿಯ ನಟನೆ, ಎಂದು ಗೊತ್ತಿದ್ದರೂ, ಅವರು ಆಕೆಗೆ ತೋಳು ತೆರೆಯಿಸಿ ಸೂಜಿ ಚುಚ್ಚುವರು; ಹಣೆಗೆ ಮುಲಾಮು ಹಚ್ಚುವರು; ಬೆನ್ನಿಗೆ ಪೌಲ್ಟೀಸ್ ಬಿಗಿಯುವರು; ಹೊಟ್ಟೆಗೆ ದ್ರಾವಕ, ಕಣ್ಣಿಗೆ ಅಂಜನ, ಗಂಟಲಿಗೆ ಗಾರ್ಗಲು, ಬಾಯಿಗೆ ಕ್ಷ ಗುಳಿಗೆ, ಕಾಲಿಗೆ ಪಟ್ಟೀಸ್, ಸೊಂಟಕ್ಕೆ ಟರ್ಪೆಂಟೀನ್... ಹೀಗೆ ಅಂಗಾಂಗಗಳೆಲ್ಲ ಬಾಧೆಕೊಟ್ಟು ಸುಸ್ತು ಮಾಡಿಸಿ ಮಲಗಿಸುವರು. ಹಾಗೆ ಊರಿನ ದೊಡ್ಡ ದೊಡ್ಡ ಡಾಕ್ಟರುಗಳನ್ನು ತನ್ನ ಮನೆಗೆ ವೃಥಾ ಬರಮಾಡಿಕೊಂಡು ತನ್ನ ಹಾಸಿಗೆ ಸುತ್ತ ಓಡಾಡಿಸಿ, ತನ್ನ ಶ್ಲೇಷ್ಮಾದಿಗಳನ್ನು ಸಂಶೋಧಿಸುವುದರಲ್ಲಿ ಆಕೆಗೆ ಆಂತರಿಕ ಆನಂದ. ಆತ್ಮಾಭಿಮಾನಕ್ಕೆ ತೃಪ್ತಿ.

ಅಗಲಿಸು	To separate
ಅಂಗಾಂಗ	Body (parts of –)
ಔಷಧ	Medicine
ಅರಚು	Shout, scream
ಆಮೆನ್	Amen
ಅರ್ಧ ಸ್ವರ	Half tone.
ಆಂತರಿಕ	Internal
ಆತ್ಮಾಭಿಮಾನ	Self-respect
ಇಮ್ಮಡಿ	Twice
ಉದ್ಭವಿಸು	To be born, arise.
ಉಪಾಯ	Plan
ಉಳುಕು	Sprain
ಒಣಗು	To Dry
ಒಂದೇ ಸಮನೆ	Non-stop
ಒಂದಾವರ್ತಿ	Once
ಕಣ್ಣು ರೆಪ್ಪೆ	Eye lash
ಕಿರಚು	Shout

ಕಿವುಚು	Squeeze
ಕೀಚಲು	Shrill
ಕೆಂಡ	Cinder
ಕೆರಳು	Get angry.
ಗುಡ್ಡೆ	Pupil (of the eye).
ಗುಳಿಗೆ	Pill
ಚುಚ್ಚು	Pierce
ಜ್ವರ	Fever
ತೀವ್ರ	Intense
ತುಳಿ	Tread
ತೊಟ್ಟು	Drop
ಚಾಳಿ	Habit
ತೆರೆ	Open
ದೆವ್ವ	Ghost
ದ್ರವ!	Liquid
ನಟನೆ	Pretence
ನಾಡಿ	Pulse

ನಾಲಗೆ	Tongue
ಹಿಗ ಹಗ	Uncontrolled
ಹರಡು	Give out, spread.
ಡ್ರೆಸ್ಸಿಂಗ್	Bandage
ಬಗೆ ಬಗೆ	Various
ಬಗ್ಗಿಸು	Bend
ಬರ ಮಾಡಿಕೋ	Invite
ಬಂಗಲೆ	Bungalow
ಬಿಗ	Tight,
ಬಿಕ್ಕಟ್ಟು	Irksome
ಬೆರಳು	Finger
ಭಯಂಕರ	Frightening
ಮಹಾತಾಯಿ	Great lady
ಮುಲಾಮು	Ointment
ಯತ್ನಿಸು	Try
ಲಂಕಿಣಿ	Shrew

ಲಂಗು ಲಗಾಮು	Control
ಲಲ್ಲೆ ಹೊಡೆ	Have fun by chatting
ವ್ಯರ್ಥ	In vain
ಚಿಕಿತ್ಸೆ	Treatment
ಶ್ಲೇಷ್ಮಾದಿಗಳು	Phlegm and etc.,
ಸಂಭವ	Possibility
ಸೂಜಿ	Needle
ಸೊಂಟ	Waist
ಸಾಧಿಸು	Prove
ಸಿಡಿ	Burst
ಸೂರು	Ceiling
ಸೆಳೆ	Attract
ಹಚ್ಚು	Smear
ಹಾವು	Snake
ಹೋಳಾಗು	Split
ಹೊರಳು	Roll
ಹಣೆ	Forehead

ಗೃಹದಾರಣ್ಯಕ!   ನಾ. ಕಸ್ತೂರಿ.

ಪುಟ 50-51

ರಾಜಲಕ್ಷ್ಮಿಯು ಹೃದಯ ವಿದ್ರಾವಕ ಪತ್ರವನ್ನು ಓದಿದ ಕೂಡಲೆ ಅಳಿಯನನ್ನು ಬೇರೆ ಊರಿಗೆ ವರ್ಗ ಮಾಡಿಸಿ ಬರಲು ರಾಜಣ್ಣನವರ ಸಮೀಪಕ್ಕೆ ತಮ್ಮಯ್ಯನವರೇ ಕೋಟು ಪೇಟ ಸಮೇತ, ಹೂವಿನ ಹಾರ ಕಿತ್ತಳೆ ಹಣ್ಣು, ಕಿಸಿಮಿಸಿ ಸಹಿತ ಹೊರಟರು. "ಬನ್ನಿ, ಬನ್ನಿ" ಎಂದು ಸ್ವಾಗತಿಸುತ್ತ ಅವರು ಒಳಗಿಂದಲೇ ಕೂತಿದ್ದ ಹಾಗೆಯೇ ತಮ್ಮಯ್ಯನವರನ್ನು ಬರಮಾಡಿಕೊಂಡರು. ಎಂಥ ಸೌಜನ್ಯ ಎಂದು ತಮ್ಮಯ್ಯನವರು ಅವರನ್ನು ಕೊಂಡಾಡಿದರು. ಕಲ್ಪಕರು! ಬೇರು ಸರಾಕೆ ಎದ್ದು ಬರಲು ಸಾಧ್ಯವೆ? ಕೂತ ಹಾಗೆಯೇ ಆಶೀರ್ವಾದ ಮಾಡುವುದು ಅವರ ರೂಢಿ. ತಮ್ಮಯ್ಯನವರು ತಂದಿದ್ದ ಅಹವಾಲನ್ನು ಕೇಳುತ್ತಲೂ ರಾಜಣ್ಣನವರು "ಇಷ್ಟೇನೆ?

ಏನೋ ಒಂದು ಮಹತ್ಸಾಧನೆ ಅಂತ ಇದ್ದ. ಒಂದು ಕಡೆಯಿಂದ ಬೇರೊಂದು ಕಡೆಗೆ ಬದಲಾಯಿಸಿ ಕೊಡುವುದೆ? ಅದೆಷ್ಟರ ಕೆಲಸ? ಇವತ್ತು ನಂಜೆ ಬಿಪಾಲಗೇ ಕಳ್ಳುಬಂದಿ ಕೊಡುತ್ತೇನೆ ಆಹಃಹ್ನು. ... ಇನ್ನೇನಾದರೂ ಇದೆಯೆ? ಯಾರಿಗಾದರೂ ನೌಕರಿ ಬೇಕಿತ್ತೇನು? ನಿಮ್ಮ ಅಳಿಯ ಈತ[1] ಅಂತ ನನಗೆ ಮೊದಲೆ ತಿಳಿದಿದ್ದರೆ, ಎತ್ತಿ ಕೊಳ್ಳುತ್ತಲೆ ಅಸಿಸ್ಟಂಟ್ ಕಮಿಷನರ್‌ಗಿರಿ-ಮೇಲೆಯೆ ಕೂರಿಸುತ್ತಾ ಇದ್ದ. ಅಮಲ್ದಾರಿ ಬಹಳ ಜುಜುಬಿ ಕೆಲಸ ಅಂಥವನಿಗೆ. ನಾಯಿಯ ಹಾಗೆ ಅಲೆಯಬೇಕು; ಬೆಕ್ಕಿನ ಹಾಗೆ ಕಾದಿರಬೇಕು; ಕುದುರೆಯ ಹಾಗೆ ನಿಟ್ಟುಸಿರು ಬಿಡಬೇಕು; ... ಹೇಸರಕತ್ತೆಯ ಹಾಗೆ ದುಡಿಯಬೇಕು. ಅವರವರ ಮುಂದೆ ಕಟ್ಟಿದ ಕೈ ಬಿಚ್ಚುವ ಹಾಗೆಯೇ ಇಲ್ಲ... ಊರಿನ ಮೇಲೆ ಏರಿ ಬರುವ ಪ್ರತಿಯೊಬ್ಬ ದೊಡ್ಡ ಮನುಷ್ಯನೂ "ಕರೆ ಅಂದ್ರಾ

---

[1] ಈತ = ಇವನು.

ನಿಮ್ಮ ಅಮಲ್ದಾರರನ್ನ... ಏನ್ರೀ[1], ಮೊಸರೆಲ್ರಿ, ಹಾಲೆಲ್ಲಿ, ಕೋಳಿಮೊಟ್ಟೆ ಎಲ್ರಿ" ಅಂತ ಜಬರದಸ್ತ್ ಮಾಡ್ತಾ ಇರುತ್ತಾರೆ. ಬೆವರು ಕಿತ್ತುಕೊಂಡು ಓಡಬೇಕು ಅವನು. ತಾಲ್ಲೂಕಿನ ಮೂಲೆ ಮೂಲೆಗೂ.... ಮಳೆ ಬಿದ್ದರೆ ಅಮಲ್ದಾರನ ಕರೆ, ಕೆರೆ ಬತ್ತಿದರೆ ಕರೆ ಅವನನ್ನ... ಸಂತೆ, ಜಾತ್ರೆ, ಪ್ಲೇಗು, ಕಾಲರಾ, ಎಲ್ಲಕ್ಕೂ ಅವನೇ ಹೆಗಲು ಕೊಡಬೇಕು... ಬೇವಾರ್ಸಿ ಬದುಕು.

ನಾನು ಹೇಳಿದೆ ಮೊನ್ನೆ... ಮಂತ್ರಿಗಳಿಗೆ... ಅವರೇ ಕೇಳಿದರು... ಏನ್ರೀ, ರಾಜಣ್ಣನವರೇ, ಏನು ಮಾಡೋಣ ಅಂತ... ಅವರಿಗೂ ನನಗೂ ಬಹಳ ಬಹಳ[2]... ಯಾರಿಗೂ ಹೇಳಬೇಡಿ... ಕತ್ತಲಾದ ಮೇಲೇನೇ ನಮ್ಮ

1 ಏನು + ರೀ = ಏನ್ರೀ = what mister ?.

2. ಬಹಳ ಬಹಳ = great intimacy.

ಅವರ ಹಗರಣ ಹರಟೆ ಎಲ್ಲ... ಮೊನ್ನೆ ಡೆಲ್ಲಿಗೆ ಹೋದಾಗ, ವಿಮಾನದಿಂದ, ಮಂತ್ರಿಗಳು ಕರವಸ್ತ್ರ ಬೀಸಿದರಲ್ಲಾ... ನೋಡಿಲ್ಲವೇ ನೀವು... ಓ! ಅಂದ ಹಾಗೆ ನೀವಿರಲಿಲ್ಲವಲ್ಲಾ, ನಿಲ್ದಾಣದಲ್ಲಿ... ಕರವಸ್ತ್ರ ಬೀಸಿದರಲ್ಲಾ... ಅಲ್ಲಿ ಭೂಮಿ ಮೇಲೆ ನಿಂತಿದ್ದವರ ಪೈಕಿ ಪ್ರತಿಯೊಬ್ಬನೂ ಅದು ತನಗೆ ಎಂದು ತಪ್ಪು ತಿಳಿದು ಹಿಗ್ಗಿದರು... ಆದರೆ ನನಗೂ ಅವರಿಗೂ ಗೊತ್ತು, ಅದು ನನಗೇ ಎನ್ನುವುದು... ಹೋಗಿ ಬರುತ್ತೇನೆ ಎಂದು ಹೇಳಿದ್ದ ಅವರು ನನಗೇನೆ!"

అహవాలు	Appeal
అలె	Wander
ఎత్తి కొళ్ళుత్తలె	In the very beginning.
చఢాయి	Raid
కరవస్త్ర	Hand kerchief
కల్పతరు	Mythological tree which grants wishes.
ఇత్తు కొండు	Pulling
కిసి మిసి	Raisins
కొండాడు	Praise
జబర్ దస్త్	Bossing
జుజుబి	Ordinary
తాల్లూక్కు = తాలూక్కు	County
నిట్టుసిరు	Sigh
నిల్దాణ	Stop
నౌకం	Job

ಪೈಕಿ	Among
ಒಣ	Dry
ಬೇರು	Root
ಬೇವಾರಸಿ	Orphan; vagabond.
ಬಿಚ್ಚು	Unfold
ಮೂಲೆ	Corner
ಮೊಸರು	Curds
ರೂಢಿ	Custom
ವಿಮಾನ	Aeroplane
ಸಮೀಪ	Near, vicinity
ಸಮೇತ	With
ಸಹಿತ	With
ಸ್ವಾಗತಿಸು	To welcome
ಹಗರಣ ಹರಟೆ	Business
ಹಾರ	Garland

ಹೆಗಲು	Shoulder
ಹೇಸರಗತ್ತೆ	Mule
ಹೃದಯ ವಿದ್ರಾವಕ	Heart rending

ಜಿ. ಪಿ. ರಾಜರತ್ನಂ, 1909-

ರಾಜರತ್ನಂರವರು 1909ರಲ್ಲಿ ಒಂದು ವೈಷ್ಣವ ಮನೆತನದಲ್ಲಿ ಹುಟ್ಟಿದರು. ಅವರ ವಿದ್ಯಾಭ್ಯಾಸ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಯಿತು. ಎಂ.ಎ. ಪಾಸು ಮಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾದರು.

ರಾಜರತ್ನಂ ಬರೆಯಲು ಪ್ರಾರಂಭಿಸಿದ ಕಾಲದಲ್ಲಿ ಆಡುವ ಭಾಷೆಗೂ ಬರೆಯುವ ಭಾಷೆಗೂ ಬಹಳ ವ್ಯತ್ಯಾಸವಿತ್ತು. ರಾಜರತ್ನಂ ಸಾಮಾನ್ಯ ಜನ ಆಡುವ ಭಾಷೆಯಲ್ಲಿ ಬರೆಯಲು ಪ್ರಯತ್ನಿಸಿದ್ದಾರೆ. ಯೆಂಡ ಕುಡುಕ ರತ್ನ, ಕಂಬ್ಳಿ ಸೇವೆ ಮತ್ತು ನರಕದ ನ್ಯಾಯಗಳಲ್ಲಿ ಹಳ್ಳಿಯ ಜನರ ಭಾಷೆಯನ್ನು ಉಪಯೋಗಿಸಿದ್ದಾರೆ. ಮಕ್ಕಳಿಗಾಗಿ ಬಹಳ ಪುಸ್ತಕಗಳನ್ನು ಬರೆದಿದ್ದಾರೆ.

ರಾಜರತ್ನಂ ಅವರು ಜೈನ ಧರ್ಮ ಮತ್ತು ಬುದ್ಧ

ಧರ್ಮದ ಮೇಲೆ ಕನ್ನಡದಲ್ಲಿ ಪುಸ್ತಕಗಳನ್ನು ಬರೆದಿದ್ದಾರೆ. ಅಂತಹ ಪುಸ್ತಕಗಳು ಕನ್ನಡದಲ್ಲಿ ಕಡಿಮೆ. ಹಳೆಗನ್ನಡ ಗ್ರಂಥಗಳನ್ನು ಹೊಸಗನ್ನಡಕ್ಕೆ ಅನುವಾದಿಸಿದ್ದಾರೆ.

ಕಂಬಳಿ (ಕಂಬ್ಳಿ)	Blanket
ಜೈನ ಧರ್ಮ	Jainism
ಬುದ್ಧ ಧರ್ಮ	Buddhism
ಸೇವೆ	Service
ಹೆಂಡ ಕುಡುಕ	Drunkard

ರಾಷ್ಟ್ರಪಾಂತನ ಹಲ್ಲು   ಜಿ. ಪಿ. ರಾಜರತ್ನಂ

ಪುಟ 57-58

ನಾನೊಬ್ಬ ಸ್ಕೂಲು ಮೇಷ್ಟರು. ಮೊನ್ನೆ ನನ್ನ ಜೊತೆಯ ಉಪಾಧ್ಯಾಯರ ಕೊಠಡಿಯಲ್ಲಿ ಮಾತನಾಡುತಾ ಕುಳಿತಿದ್ದೆ. ಇವನ ಯೋಗ್ಯತೆ, ಅವನ ಯೋಗ್ಯತೆ ಅಂತ ಯಾರೋ ಇಬ್ಬರಿಗೆ ಗ್ರಹಚಾರ ಬಿಡಿಸುತಾ ಇದ್ದೆವು. ಮಧ್ಯೆ ಜವಾನ ಬಂದು "ಸ್ವಾಮಿ, ಸಾಹೇಬರು ಕರೀತಾರೆ, ಬನ್ನಿ" ಅಂತ ನನ್ನ ಕರೆದ. ನಾನು ಮೇಜಿನ ಬೀಗ ಹಾಕಿ, ಬೀಗದ ಕೈ ಕೈಯಲ್ಲಿ ಹಿಡಿದುಕೊಂಡು, ಹೆಡ್ಮಾಸ್ಟರವರ ಆಫೀಸಿಗೆ ಹೋದೆ.

"ಕೂತುಕೊಳ್ಳಿ, ಒಂದು ನಿಮಿಷ. ಈ ಫೈಲ್ ಮುಗಿಸಿಬಿಟ್ಟು ಬಂತೆ" ಅಂದರು ಹೆಡ್ಮಾಸ್ಟರು. ನಾನು ವಿಧೇಯನಂತೆ ಎದುರು ಕುರ್ಚಿಯಲ್ಲಿ ಕುಳಿತೆ.

× × × × ×

"ಅವನೇ ಕೂತುಕೊಂಡನಂತೆ, ನಿನಗೇನು ಸಂಕೋಚ? ಬಾ, ಅವನು ಕುರ್ಚಿಯ ಮೇಲೆ ಕೂತರೆ ನೀನು ಮೇಜಿನ ಮೇಲೆ ಬಿದ್ದುಕೋ" ಎಂದು ಯಾರೋ ಹೇಳಿದ ಹಾಗಾಯಿತು. ಯಾರು ಎಂದು ನೋಡಿದೆ. ಮೇಜಿನ ಮೇಲೆ ಹೆಡ್ಮಾಸ್ಟರವರ ಬಲಕ್ಕೆ ಆಚೆ ಬಿದ್ದಿದ್ದ ಆಫೀಸ್ ಕಬ್ಬಿಣದ ಪೆಟ್ಟಿಗೆಯ ಬೀಗದಕೈಗಳು ಹಾಗೆ ಮಾತನಾಡಿದವು! ಯಾರನ್ನು ಅದು ಹಾಗೆ ಮಾತನಾಡಿಸಿದವು? ಅಂತೆ ನಾನು ಯೋಚಿಸುವಷ್ಟರಲ್ಲಿ ಕೈಯಲ್ಲಿದ್ದ ನನ್ನ ಮೇಜಿನ ಬೀಗದಕೈಗಳು ನನ್ನ ಬೆರಳುಗಳ ಮಧ್ಯದಿಂದ ನುಸುಳಿಕೊಂಡು ಮೇಜಿನ ಮೇಲೆ ಹಾರಿ ಮಲಗಿಕೊಂಡಿತು! ಆಶ್ಚರ್ಯದಿಂದ ಮೂಕನಾಗಿ ಬೆಪ್ಪನಂತೆ ಕುಳಿತುಕೊಂಡೆ.

"ಏನು ಸಮಾಚಾರ?" ಎಂದರು ಹೆಡ್ಮಾಸ್ಟರವರ ಬೀಗದಕೈ.

"ನಾನು ಏನು ಹೇಳ್ಲಿ? ನಿನ್ನನ್ನ ಒಂದು ಮಾತು ಕೇಳ್ಬೇಕು ಅಂತ ಬಹಳ ದಿವಸದಿಂದ. ಈ ಹೆಡ್ ಮೇಷ್ಟ್ರು ನಿನ್ನನ್ನ ಒಂದು ಕ್ಷಣವಾದರೂ ಆಚೆ ಈಚೆ ಹೋಗೋಕೆ ಬಿಡೋಲ್ಲವಲ್ಲ? ನಿನಗೆ ಬಹಳ ಬೇಜಾರಾಗೋದಿಲ್ಲವೆ? ಈಗ ನಮ್ಮ ಈ ಇವನು ಇದ್ದಾನೆ ನೋಡು, ಎಲ್ಲಿ ಅಂದರೆ ಅಲ್ಲಿ, ಹೇಗೆ ಅಂದರೆ ಹಾಗೆ, ಯಾವಾಗ ಅಂದರೆ ಆವಾಗ ನನ್ನನ್ನ ನನ್ನ ಪಾಡಿಗೆ ಬಿಟ್ಟು ಬಿಡುತ್ತಾನೆ. ಅಲ್ಲ ಭಾರತೀಯರಿಗಂತೂ ಬಂಧನ ಬ್ರಹ್ಮ ಬರೆದದ್ದು ಅಂದರೆ,[1] ನಮಗೆ ಬೀಗದ ಕೈಗಳಿಗೂ ಅದೇ ಹಣೇ ಬರಹಾನೆ? ಏನು ಸಮಾಚಾರ ಅಂತ ನೀನು ಹೇಳ್ಬೇಕು ನನಗೆ" ಎಂದಿತು ನನ್ನ ಬೀಗದ ಕೈ.

---

1. ಬ್ರಹ್ಮ ಮನುಷ್ಯ ಹುಟ್ಟುವಾಗ ಅವನ ಭವಿಷ್ಯವನ್ನು ಹಣೆಯ ಮೇಲೆ ಬರೆಯುತ್ತಾನೆ ಎಂದು ಹಿಂದೂಗಳು ನಂಬುತ್ತಾರೆ.

"ಎಲಾ ಇದರ!"[1] ಎನ್ನಿಸಿತು ನನಗೆ. "ಇದು ಅದನ್ನ ಮಾತನಾಡಿಸುವ ಹಾಗೆ ನಾನು ಬೇರೆ ನನ್ನ ಹೆಡ್‌ಮಾಸ್ಟರನ್ನ ಈ ಜನ್ಮದಲ್ಲಿ ಮಾತನಾಡಿಸುವ ಹಾಗಿಲ್ಲ" ಎಂದುಕೊಂಡೆ.

ಹೆಡ್‌ಮಾಸ್ಟರವರ ಬೀಗದ ಕೈ "ನಿನ್ನ ಮಾತಿನ ಅಬ್ಬರ ಕೇಳಿದರೆ, ನಿಜವೇನೋ ಅಂತ ಭ್ರಮೆ ಆಗಿಬಿಡುತ್ತೆ. ನೀನು ಬುದ್ಧಿವಂತ ಅನ್ನೋದನ್ನ ಒಪ್ಪಿಕೊಂಡೆ. ಆದರೆ ನಿನ್ನನ್ನ ಒಂದು ಪ್ರಶ್ನೆ ಕೇಳ್ತೇನೆ. ನಿನ್ನ ಕೈಯಲ್ಲಿ ಯಾವ ಯಾವ ಮೇಜಿನ ಬೀಗ ತೆಗೆಯೋದಕ್ಕೆ ಆಗುತ್ತೆ? ಸ್ವಲ್ಪ ಹೇಳು.' ಎಂದು ಕೇಳಿತು.

"ಇಷ್ಟೇನೆ ಪ್ರಶ್ನೆ! ನಮ್ಮ ಸ್ಕೂಲಿನಲ್ಲಿರುವ ಪ್ರತಿಯೊಂದು ಮೇಜಿನ ಬೀಗಾನೂ ತೆಗೀಬಲ್ಲೆ, ಬೇಕಾದರೆ, ನಾನು.

---

1. ಎಲಾ ಇದರ : look at this!

ನೀನು ಯಾವ ಯಾವ ಬೀಗ ತೆಗೀತೀಯ?"

"ನನ್ನ ಕೈಲಿ ಹೆಚ್ಚು ಆಗೋಲ್ಲಪ್ಪ. ನನ್ನ ಸೃಷ್ಟಿಸಿದವನು ಈ ಒಂದು ಕಬ್ಬಿಣದ ಪೆಟ್ಟಿಗೆ ತೆಗೆಯೋಕೆ ಮಾತ್ರ ನನಗೆ ಶಕ್ತಿ ಕೊಟ್ಟಿದ್ದಾನೆ, ಅಷ್ಟೆ."

ಆ ಮಾತು ಕೇಳಿ ನನ್ನ ಬೀಗದ ಕೈ ನಕ್ಕುಬಿಟ್ಟಿತು.

"ಇಷ್ಟೇನೆ!" ಅಂತ ಆ ನಗುವನ್ನು ಬೀರಿತು.

ಒತ್ತಡ	Force
ಆಚೆ	Beyond
ಒತ್ತು	Emphasize
ಕ್ಷಣ	Moment
ಪ್ರಚಾರ ಮಾಡು	Scandal mongering
ಜನ್ಮ	Birth
ನುಸುಳು	Squeeze through
ಬಂಧನ	Imprisonment
ಬಿದ್ದುಕೊ	Lay down
ಬೀಗ ಕೆಸಲು	Key
ಪಾಡು	Fate
ಮೂಕ	Dumb
ಭ್ರಮೆ	Illusion
ವಿಧೇಯ	Obedient

సమాచారం	News
సృష్టించు	Create
సంకోచము	Embarrassment

ಚೋಮನ ದುಡಿ   ಶಿವರಾಮ ಕಾರಂತ

ಪುಟ 6-7

ಚೋಮನ ದುಡಿಯಂತೂ ಒಂದು ವಿಶೇಷವಲ್ಲ. ಚೋಮನ ಬಾಳ್ವೆಯಲ್ಲಿ ವಿಶೇಷವಿದ್ದರಲ್ಲವೆ ಅವನ ದುಡಿಯಲ್ಲಿರುವುದು? ಚೋಮ ಹೊಲೆಯರವನು; ಭೋಗದ ಹಳ್ಳಿಯ ಕಾಡಿನ ಸಂದಿನಲ್ಲಿ ಅವನದೊಂದು ಹಟ್ಟಿಯಿದೆ. ಹಟ್ಟಿಯೆಂದರೆ ನೂರಾರು ಮನೆಗಳಲ್ಲ; ಒಂದೇ ಒಂದು ಮನೆ... ಮನೆಯಲ್ಲ - ಹೊಗಳು, ಗುಡಿಸಲು. ಅಲ್ಲಿರುವವರು ಚೋಮ, ಅವನ ಐದು ಮಂದಿ ಮಕ್ಕಳು. ಇನ್ನೂ ಹೆಚ್ಚಿನ ಬಳಗವೆಂದರೆ - ಒಂದು ಕಂ ನಾಯಿ, ಎರಡು ಹಸುವಿನ ಕರುಗಳು. ಇದು ಅವನ ಅಷ್ಟವೇದ ಬಳಗ. ಚೋಮನಿಗೆ ಐವತ್ತೈದು ವಯಸ್ಸು ನಡೆಯುತ್ತಿರಬಹುದು. ಅವನ ವಯಸ್ಸನ್ನು ಎಷ್ಟೆಂದು ಖಂಡಿತವಾಗಿ ಹೇಳುವ ಹಾಗಿಲ್ಲ. ಹೇಳಿದರೆ ನಾವು ಹೇಳಬೇಕು; ಕಂಡವರು ಹೇಳಬೇಕು. ಅವನನ್ನೇ ಕೇಳಿದರೆ

"ಏನೋ ಅಪ್ಪ ಅದೆಲ್ಲ ಯಾರಿಗೆ ಗೊತ್ತು?" ಎನ್ನುತ್ತಾನೆ. "ಏನು, ನೂರು ವರ್ಷಗಳಾಗಬಹುದೇ?" ಎಂದರೂ "ಏನೋ ಅಪ್ಪ"- ಎನ್ನುತ್ತಾನೆ. ಅಥವ "ಇಪ್ಪತ್ತು ಆಗಬಹುದೇ" ಎಂದು ಕೇಳಿದರೂ "ಏನೋ ಅಪ್ಪ"- ಎನ್ನುತ್ತಾನೆ. ಎಲ್ಲೋ ಒಂದು ಸಾರಿ "ನಮ್ಮ ಸಂಕಪ್ಪಯ್ಯ ಧನಿಯರಿಗೂ ನನ್ನ ಜೋನಿಯನಿಗೂ ಹತ್ತು ದಿನದ ಹುಟ್ಟು ಕಡಿಮೆ" ಎಂದ ನೆನಪು. ಇನ್ನೊಮ್ಮೆ "ದೊಡ್ಡ ಒಡೆಯರಿಗೂ ನನಗೂ ಸಮಪ್ರಾಯವಂತೆ" ಎಂದುದುಂಟು.[1] ದೊಡ್ಡ ಧನಿಯರು ಎಂದರೆ ಸಂಕಪ್ಪಯ್ಯನವರ ತಂದೆ. ಇದರ ಮೇಲಿಂದ ಅವನಿಗೆ ಎಪ್ಪತ್ತೈದಕ್ಕೆ ಮಿಕ್ಕಿ ಪ್ರಾಯವಾಗಿರಬೇಕೆಂದು ನಮ್ಮ ಊಹೆ. ಗಟ್ಟಿಮುಟ್ಟ ಆಳು; ಆದರೂ ಮುಪ್ಪಿನ ಹತ್ತಿರ ಬಂದು

[1] ಎಂದುದು + ಉಂಟು = ಎಂದುದುಂಟು = ಎಂದಿದ್ದನು.

ತೆಗಲಿದೆ. ಮೀಸೆ ಪೂರ್ತಿ ಬಿಳಿದಾಗದಿದ್ದರೂ ಅರೆ ಬಿಳಿದಾಗಿದೆ. ಚೋಮನನ್ನು ಕೇಳಿದರೆ – "ನಾನಿನ್ನು ನೂರು ವರುಷ ಬದುಕಿರಲಿಕ್ಕಿಲ್ಲವೇ?" ಎನ್ನುತ್ತಾನೆ. ಅವನಿಗೆ "ನೂರು" ಎಂದರೆ ಎಷ್ಟೆಂದು ತಿಳಿದಿದ್ದರಲ್ಲವೆ! ಅವನ ಹೆಂಡತಿ, ಹೆಂಡತಿಯೆಂದರೆ ಗೌರವದ ಮಾತಾಯಿತು, ಅವನ [illegible] ತೀರಿಕೊಂಡು ಐದು ವರ್ಷಗಳಾದುವು. ಗುಳ್ಳೆಗಳ ಉಪದ್ರದಿಂದ ರಕ್ತಕಾರಿ ಸತ್ತಳಂತೆ! ಈಗ ಉಳಿದ ಬಳಗವೆಂದರೆ - ಅವನ ಐವರು ಮಕ್ಕಳು. ಹಿರಿಯನಿಗೆ ಹುರಿದುಂಬುವವರ ಪ್ರಾಯ. ಅಂದರೆ ಸುಮಾರು 20-25. ಅವನ ಹೆಸರು ಹಿಂದೆ ಹೇಳಿದೆವಲ್ಲ - ಚನಿಯನೆಂದು. ಚನಿಯನ ತಮ್ಮ ಗುರುವ. ಅವನಿಗೆ ತಮ್ಮನಿಲ್ಲ; ತಂಗಿ ಬೆಳ್ಳಿ. ಆಕೆ ಚೋಮನ ಜೀವ. ಅವನಿಗೂ ಕಿರಿದಾಗಿರುವ ಎಂಟು ವರುಷದ ಕಾಳನೊಬ್ಬ.

ಒಂದೆರಡು ವರುಷ ಅಂತರದ ನಾಲನೊಬ್ಬು. ಇಷ್ಟು ಜನ ಸೇರಿರುವ ಸಂಸಾರವದು.[1]

ಭೀಮನ ಕುಟುಂಬದವರಲ್ಲಿ ಒಂದು ಹೃಯಿನ ವಿಷಯಗಳಲ್ಲಿನ[2] ಅನ್ಯೋನ್ಯ. ಸತ್ತು ಹೋದ ಆ ಹೆಂಡತಿಯಿದ್ದರೆ ಇನ್ನಷ್ಟು ಚಂದವಿತ್ತು. ಆ ಮಾತನ್ನು ಬಿಡಿ-ಸತ್ತವರೆಲ್ಲ ಬದುಕಿದ್ದರೆ ಪ್ರಪಂಚ ಯಾವ ರೀತಿ ಇರುತ್ತಿತ್ತೋ! ಭೀಮನು ಸಂಕಪ್ಪಯ್ಯನವರ ಮೂಲದ ಹೊಲೆಯ. ಮೂಲದವನೆಂದರೆ ಅವರ ಅನುಮತಿಯಿಲ್ಲದೆ ಇನ್ನೊಬ್ಬ ಧನಿಯ ಆಶ್ರಯವನ್ನು ರಾಭಸ್ತ್ರಾಗಲಿ ನಷ್ಟಸ್ತ್ರಾಗಲಿ, ಇವರಾಗಲಿ ಇವರ ಪರಂಪರೆಯವರಾಗಲಿ, ಬಿಡುವಂತಿಲ್ಲ. ಅವರ ಧನಿ-

---

[1] ಸಂಸಾರವು + ಅದು = ಸಂಸಾರವದು. = ಅದು ಇಷ್ಟು ಜನ ಸೇರಿರುವ ಸಂಸಾರ.

[2] ವಿಷಯಗಳಲ್ಲಿನ = ವಿಷಯಗಳಲ್ಲಿ ಇರುವ

ಯುವರು ಕರಿಯು - ಹಾಲವೀರಲ, ಮೂಲವೀರಲ, ಜೋಗಿಮನೆ
ವೀರಂಡೆರೆಯುವರನ್ನು ನಡೆಯಿಸಿಕೊಂಡು ಬರಬೇಕು.

ಅಥವಾ	Or
ಅಪೂರ್ವ	Rare
ಅಂತರ	Difference
ಅನ್ಯೋನ್ಯತೆ	Intimacy
ಅರೆ	Half
ಆಶ್ರಯ	Refuge
ಆಳು	Person
ಇನ್ನೊಮ್ಮೆ	Again, once more
ಇಪ್ಪತ್ತು	Twenty
ಉಪದ್ರ	Trouble
ಊಹೆ	Guess
ಎಸಳು	Petal
ಐವತ್ತು	Fifty
ಐವತ್ತೈದು	Fifty five
ಕರು	Calf

ಕಾರು	Vomit
ಕಿರಿಯ	Young
ಕೊಗ್ಗು	Hut
ಕೊಪ್ಪ	Settlement
ಗಟ್ಟಿ ಮುಟ್ಟಿ	Strong
ಗುಳಗ	Ghost
ತೀರಿಕೊ	Die
ದನಿಯ	Lord
ಸಹಾಯಕು	Support
ನಷ್ಟ	Loss
ನೆನಪು	Memory
ಪ್ರಾಯ	Age
ಸಮ ಪ್ರಾಯ	Same age
ಬಳಗ	Relatives
ಬಾಳ್ವೆ	Life
ಮಿಕ್ಕಿ	In excex

ಮೀಸೆ	Moustache
ಮೂಲ	Origin
ಲಾಭ	Profit
ವಿಶೇಷ	Special
ಸಂದಿ	Corner, lane.
ಹಿಡಿ	Hold
ಹೊಲತಿ	Untouchable woman

ಚೋಮನ ದುಡಿ ಶಿವರಾಮ ಕಾರಂತ.

ಪುಟ 99-100.

ಮುಂದಿನ ಮಳೆಗಾಲದ ನಿರೀಕ್ಷೆಯು ಹಳ್ಳಿಯವರಲ್ಲೆಲ್ಲ ನಡೆಯುತ್ತಿದೆ. ಅವನೀಗ ಅರುವತ್ತರ ಅವಧಿಯನ್ನು ಕಳೆದಿರುವನು.[1] ಕೂದಲೆಲ್ಲ ನರೆತಾಗಿದೆ. ಈ ಒಂದು ವರ್ಷದಲ್ಲಿ ಮುಖದಲ್ಲಿ ನೆರಿಗೆಗಳು ಬರತೊಡಗಿವೆ. ಹಲ್ಲುಗಳು ಅಸ್ಥಿರವಾಗಿವೆ. "ಇನ್ನೆಷ್ಟು ವರ್ಷ ನಾನು ಬದುಕಬಲ್ಲೆ! ಈ ಮಳೆಗಾಲ ಕಳೆದರೆ ಮುಂದಿನ ಮಳೆಗಾಲ ನನಗೆ ನೇಗಿಲಿನ ಋಣ ಬಂದೀತೇ? ಈಗ ಬಾರದಿದ್ದರೆ ಇನ್ನೆಂದು ಬಂದೀತು?" ಎಂಬ ಭೀತಿ ತೊಡಗಿದೆ. ಅದರಿಂದಾಗಿ ಈ ವರ್ಷವಾದರೂ ತಾನು ಬೇಸಾಯಗಾರನಾಗಲೇ ಬೇಕೆಂದು ಹಟವನ್ನು ಅವ ತೊಟ್ಟಿರುವನು. ತಿರುಗಿ ಧನಿಯವರನ್ನು ಹೋಗಿ ಬೇಡುವುದು; ಅವರು ಒಪ್ಪದಿದ್ದರೆ, ಅವರ ನೆಲದ ಋಣ ಮುಗಿಯಿತೆಂದು ತಿಳಿದು ಸರಕಾರದವರ ಭಾಗದಲ್ಲಿ ನಿಲ್ಲುವುದು.

---

[1] ಅವನಿಗೆ ಈಗ ಸುಮಾರು ಅರುವತ್ತು ವರ್ಷ ಆಗಿದೆ.

ಊರ ಹೊರಗಿನ ಆ ದೊಡ್ಡ ಮೈದಾನವಿದೆ. ನೀರಿನ ಆಸರೆಯಿಲ್ಲದಿದ್ದರೂ, ಮಳೆಗಾಲದಲ್ಲಿ ಬಂದು ಬೆಳೆಸಿ ನಿಶ್ಚಿಂತೆಯಿಂದ ಬೆಳೆಯಬಹುದು. ನಾಲ್ಕು ಕಾಳಾದರೂ ಸಿಗಲಿಕ್ಕಿಲ್ಲವೇ? ಸಿಕ್ಕಿದರೆ ಸಿಕ್ಕಿತು, ಇಲ್ಲವಾದರೆ ಇಲ್ಲ. ಹೀಗೆ ಕನಸಿಗೆ ನೆರವಾಗದ ಪ್ರಪಂಚದ ಮುಂದೆ ಒಂದು ದಿನವಾದರೂ ಮೇಲೆ ಕಿರುವಿ ನಡೆಯಬಹುದಲ್ಲ?" ಎಂಬ ನಿರ್ಧಾರ.

ಮಗಳೊಡನೆ ಸುದ್ದಿಯನ್ನು ಹೇಳಿ ಎತ್ತರದ ಧನಿಯರನ್ನು ನೋಡುವೆನೆಂದು ಮನೆಯಿಂದಿಳಿದು ಅಂಗಳಕ್ಕೆ ಬಂದನು. ನಿತ್ಯವೂ ಹೊರ ಬೀಳುವಾಗ ಸೊಂಟಕ್ಕೆ ಕತ್ತಿಯನ್ನು ಸಿಕ್ಕಿಸಿಕೊಂಡು ಬರುತ್ತಿದ್ದವನು ಇಂದು ಬರಿದೇ ಅವಸರದಿಂದ ಹೊರಟುದನ್ನು ಕಂಡು ಬೆಳ್ಳಿ ನಗುತ್ತ "ಅಪ್ಪಾ,

ಎಲ್ಲಿಗೆ ಹೊರಟೆ?" ಎಂದನು! ಅವನಿಗೆ ಸಿಟ್ಟು ಬಂದಿತು. ಹೊರಡುವ ಗಳಿಗೆಯಲ್ಲಿ "ಎಲ್ಲಿಗೆ" ಎಂಬ ಅವಲಕ್ಷಣದ ಮಾತು ಕೇಳಿಸಿತೆಂದು.[1] ಆದರೆ ಒಳ್ಳೆಯ ಮೋರೆಯನ್ನು ನೋಡುತ್ತಲೆ[2] ತುಸು ತಾಳ್ಮೆ ಬಂದಿತು. "ಎಲ್ಲಿಗಿಲ್ಲ" ಎಂದು ಮರಳಿ ಬಂದನು. ಹೊರಟ ಮುಹೂರ್ತವೇ ಚೆನ್ನಾಗಿಲ್ಲವೆಂದು ತಿಳಿದನು. ಅಂತು ಈ ಬಾರಿ ಹೋಗಿ ಧನಿಯರನ್ನು ಬೇಡಿದರೂ ಸಫಲವಾಗದೆಂದು ಭೀತಿಯಾಯಿತು. ಎರಡಾವೃತ್ತಿಯೂ ನಿರರ್ಥಕವಾದುದು ಮೂರನೆಯಾವೃತ್ತಿ ಬೇರೆಯಾಗುವುದೇನು? "ಎರಡಾದುದು ಮೂರಾಗುತ್ತದೆ" ಎಂಬ ವಾಡಿಕೆಯ ಮಾತೇ ಇದೆಯಲ್ಲ. ಧೈರ್ಯವೆಲ್ಲ ಕುಸಿದು ಚಿಂತೆಯು ಪ್ರಾರಂಭವಾಯಿತು. ಅವನ ಸಪ್ಪಗಾದ ಮೋರೆಯನ್ನು ಕಂಡು,

[1] ಹಿಂದೂಗಳು ಕೆಲಸಕ್ಕಾಗಿ ಹೊರಗೆ ಹೊರಟವನನ್ನು ಎಲ್ಲಿಗೆ ಹೋಗುತ್ತೀಯೆ ಎಂದು ಕೇಳುವುದು ಒಳ್ಳೆಯದಲ್ಲ ಎಂದು ನಂಬುತ್ತಾರೆ.

[2] ನೋಡುತ್ತಲೆ = ನೋಡಿದ ಕೂಡಲೆ

ಬೆಳ್ಳಿ ತೀರ ಸಮೀಪ ಬಂದು "ಬೇಸರವಾಯಿತೇ? ನನಗೆ ತಿಳಿದಿರಲಿಲ್ಲ - ನೀನು ಕೆಲಸಕ್ಕೆ ಹೋಗುತ್ತಿದ್ದೀಯೆಂತ; ಕತ್ತಿಯನ್ನು ಮರೆತು ಬಿಟ್ಟೆಯೆಂದು ಹಾಗೆ ಕೇಳಿದೆ; ಇನ್ನೆಂದೂ ಹಾಗೆ ಹೊರಡುವಾಗ "ಎಲ್ಲಿಗೆ" ಎಂದು ಹಾಗೆ ಕಾಡುವುದಿಲ್ಲ' ಎಂದು ನುಡಿದಳು.

ಭೀಮ ನಿಟ್ಟುಸಿರೊಂದನ್ನು ತೆಗೆದು "ದೈವ ನನ್ನ ಹಣೆಯಲ್ಲಿ ಹಾಗೆಂದೇ ಬರೆದರೆ ಯಾರೇನು ಮಾಡಲು ಬಂದೀತು?" ಎಂದನು.

"ಯಾವುದನ್ನು ಹಾಗೆ ಬರೆಯುವುದು?"

"ಯಾವುದನ್ನೆಂದರೆ - ನನ್ನ ಬೇಸಾಯದ ಆಸೆಯನ್ನು."

"ಅದೇ! ಅಪ್ಪಾ, ಸುಮ್ಮನೆ ಇಲ್ಲದ ಚಿಂತೆಯನ್ನು ನೀನು ಕಟ್ಟಿಕೊಳ್ಳುತ್ತೀ. ನಾವು ಹೊಲೆಯರಾಗಿ ಹುಟ್ಟಿ, ನಮ್ಮ ಅಂತಸ್ತಿಗೆ ಮೀರಿದ ಆಸೆ ಪಡೆದರೆ ಹೇಗೆ? ಅದೃಷ್ಟ

ಬೇಕಲ್ಲವೆ! ಮುಖ್ಯ ಬೇಕು ಅದೃಷ್ಟ. ದೇವರು ಹಣೆಯಲ್ಲಿ ಬರೆದಿರಬೇಕು. ಗುರುವ[1]ನೊಬ್ಬನ ಹಣೆಯಲ್ಲಿ ಬರೆದಿರಬೇಕೆಂದು ತೋರುತ್ತದೆ. ಅವನು ತನ್ನ ಜಾತಿ ಬಿಟ್ಟರೂ ಬೇಸಾಯಗಾರನಾದ. ಅವನೊಬ್ಬನಾದರೂ ನಮ್ಮ ಕುಲದಲ್ಲಿ ಹುಟ್ಟಿದರೂ ಬೇಸಾಯದ ಋಣ ಪಡೆದ." ಆಗ ಗುರುವನ ಹೆಸರು ಚೋಮನಿಗೆ ರೋಮಾಂಚನವನ್ನು ಹುಟ್ಟಿಸಿತು. ಅವನು ತನ್ನ ಮಾತನ್ನು ಕೇಳದಿದ್ದ ಚಿಂತೆ ಬೇರೆ. ತಿರುಗಿ ತನ್ನ ಮನೆಯ ಕಡೆ ಮುಖ ತಿರುಗಿಸದಿದ್ದುದೊಂದು ಚಿಂತೆ ಬೇರೆ. ತನ್ನ ಕಣ್ಣಿಂದೆಯೇ ಅವನು ಬೇಸಾಯಗಾರನಾದನಲ್ಲಾ ಎಂಬ ಆನಂದ — ಎಲ್ಲವೂ ನೆರೆದುವು.

[1] ಗುರುವ ಚೋಮನ ಮಗ. ಅವನು ಕ್ರೈಸ್ತ ಮತಕ್ಕೆ ಸೇರಿದನು.

ಅಂಗಳ	Yard
ಅಂತಸ್ತು	Status, level.
ಅವಧಿ	Limit
ಅವಲಕ್ಷಣ	Inauspicious, ugly.
ಅದೃಷ್ಟ	Luck
ಅಸ್ಥಿರ	Not firm
ಅಸೂಯೆ	Envy
ಆವೃತ್ತಿ	Time (number of times)
ಆಸರೆ	Support
ಇಟ್ಟುಕೊ	Keep
ಕುಸಿ	Collapse
ಋಣ	Obligation
ತಿರುವು	Turn
ತೊಡು	Wear
ತೊಡಗು	Commence
ತೀರ	Very
ದೈವ	God.

ನಿಶ್ಚಿಂತೆ	Carefree
ನೆರವು	Help
ನೆರಿಗೆ	Pleat, fold.
ನೆರೆ	(Neighbour)
	Grey hair
ನುಡಿ	Speak
ಬಲ್ಲ	Will be able
ಮುಹೂರ್ತ	Moment
ಭೀತಿ	Fear
ಮೀರಿದ	Beyond (limits)
ರೋಮಾಂಚನ	Excitement (Hair-raising)
ಸರಿ	Move
ಸಹ	Even
ಸಫಲ	Fruitful
ಸಪ್ಪಗೆ	Dejected

నిక్షేపించు	Fix
వార్త	news
వదరు	Chatter
బైట వెళ్ళు	Go out

ನಮ್ಮ ಹಳ್ಳಿಯ ಹಾಡುಗಳು ಸಂಪಾದಕ ಮತಿಘಟ್ಟ ಕೃಷ್ಣಮೂರ್ತಿ

ಪುಟ 64

"ಬುದ್ಧಿವಾದ"

ಅತ್ತೆ ಮಾವನಿಗಂಜಿ ಸುತ್ತೆಲ್ಲ[1] ನೆರೆಗಂಜಿ
ಮತ್ತೆ ಆಳುವ ದೊರೆಗಂಜಿ - ಎಲೆ ಮಗಳೆ
ಅತ್ತೆ ಮನೆಯಾಗೆ[2] ಬಾಳಮ್ಮ

ಅತ್ತೆ ಮಾವನ ಪಾದ ತಂದೆ ತಾಯಿಯ ಪಾದ
ಮತ್ತೆ ಗಂಡನ ಶ್ರೀಪಾದ - ನೆನೆದರೆ
ಚಿನ್ನ ಹೊಂದೆ ಇಕ್ಕುದು[3] ಕೈಲಾನೆ

ನೆರೆ ಮನೆ ಸಿರಿದೇವಿ ನಿಭಾ.ಗ ಎಲೆ ಮಗಳೆ
ಮನೆಯೊಳಗೆ ಭೇದ ಬಗೆಬೇಡ - ಎಲೆ ಮಗಳೆ
ತುಂಬಿದ ಮನೆಯ ಬಿಡಬೇಡ.

1. ಸುತ್ತು + ಎಲ್ಲ = ಸುತ್ತೆಲ್ಲ = Surrounding
2 ಮನೆಯಾಗೆ = ಮನೆಯೊಳಗೆ = in the house.
3 ಇಕ್ಕುದು = ಇದೆ

ಬಾಳುವೆ ಮಾಡಿದರೆ ಬಾರಮ್ಮ ಎಂದಾರು
ಬಾಳುವೆಗೆಟ್ಟು ಮತಿಗೆಟ್ಟು - ಬಾಳಿದರೆ
ತೌರಾರ ಮನೆಗೆ ಎರವಾದೆ.

ಬೇಲಿ ಮೇಗಳ[1] ಹೂವು ಬೆಳ್ಳಗಿದ್ದಾರೇನೆ
ಮಲ್ಲಿಗ್ಗೂವಿನಂಥ ಕೈಹಿಡಿದ - ಗಂಡನ ಬಿಟ್ಟು
ಅನ್ಯ ಪುರುಷನ ಬಲ ಬೇಡ

ಕನ್ನಡಿಯು ಕೈತಪ್ಪಿ ಹನ್ನೆರಡು ಹೋಳಾಗಿ
ಹೆಣ್ಣಿನ ಮನವು ಎರಡಾಗಿ - ದಾಳಿಂಬೆ
ಹಣ್ಣಾದರೇನು — ಸುಖವಿಲ್ಲ[2]

[1] ಮೇಗಳ = ಮೇಲಿನ

[2] ದಾಳಿಂಬೆಯು ಹಣ್ಣಾದ ಮೇಲೆ ಅದು ಬಿಡೆಯುತ್ತದೆ. ಒಳಗೆ ಇರುವ ಬೀಜಗಳು ಬಿದ್ದು ಹೋಗುತ್ತವೆ. ಆದ್ದರಿಂದ ಆಗ ಅದು ಪ್ರಯೋಜನವಿಲ್ಲ.

ಅನ್ಯಪುರುಷ	Man other than one's husband
ಅಂಜು	Fear, show concern
ಕೈತಪ್ಪು	Slip from the hand
ದಾಳಿಂಬೆ ಹಣ್ಣು	Pomegranate
ಬಗೆ	Make (think of)
ಬಾಳುವೆ	Life
ಬೇಲಿ	Fence
ಭೇದ	Difference
ಮತಿ	Mind
ಶ್ರೀ	Sri. — Auspicious — just like Mr.
ಹಿತ ಜೇವಿ	Well wisher
ಹಣ್ಣಾಗು	To become ripe

ಹಳ್ಳಿಯ ಹಾಡುಗಳು. ಸಂಪಾದಕ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯ
ಪುಟ 91-92

ತವರು

[illegible] ಹಣ್ಣು ಹಾಲೀಗಿಂತ[1] ಬೆಣ್ಣೆ ತುಪ್ಪಕ್ಕಿಂತ
ಚೆನ್ನಾಗಿ ಕಳಿತ ರಸಬಾಳೆ ಹಣ್ಣಿಗಿಂತ
ಚೆನ್ನರಾಣಿ ತಾಯ ಎದೆಹಾಲು.

ತವರೂರ ದಾರೀಲಿ[2] ಕಲ್ಲಿಲ್ಲ ಮುಳ್ಳಿಲ್ಲ
ಸಾಸಿವೇಯಷ್ಟು[3] ಮರಳಿಲ್ಲ. ಬಾನಲ್ಲಿ
ಬಿಸಿಲೀನ[4] ಬೇಗೆ ಸುಡಲಿಲ್ಲ.

ನೀರಮೇಲೇ[5] ನೀರು ನೀರಾಗಿ ತಾವಾರೆ[6]
ತಾವರೆಯಾಗಿ ತವರೂರು. ಹೋದಾರೆ[7]
ತಿರುಗಿ ಬರುವುದಕ್ಕೆ ಮನಸಿಲ್ಲ

1 ಹಾಲೀಗಿಂತ = ಹಾಲಿಗಿಂತ. 2 ದಾರೀಲಿ = ದಾರಿಯಲ್ಲಿ
3. ಸಾಸಿವೇಯಷ್ಟು = ಸಾಸಿವೆಯಷ್ಟು 4. ಬಿಸಿಲೀನ = ಬಿಸಿಲಿನ
5. ನೀರಮೇಲೇ = ನೀರ ಮೇಲೆ. 6. ತಾವಾರೆ = ತಾವರೆ
7. ಹೋದಾರೆ = ಹೋದರೆ.

ಕಣ್ಣೀಗೆ[1] ಕಪ್ಪಾನೆ ಬಣ್ಣಕ್ಕೆ ಸಿರಗಾನೆ
ಹೆಣ್ಣು ಮಕ್ಕಳಿಗೆ ಕವರಾನೆ. ತಾಯವ್ವ
ನಿನ್ನಾಗೆ ನಮಗೆ ಅನುಗಾಲ.

ತಾಯಿ ಇದ್ದರೆ ಭೋಗ ತಂದೆ ಇದ್ದರೆ ಭೋಗ
ನೀರಿದ್ರೆ ಬಾಳೆಹೊನೆ ಭೋಗ. ತಾಯಮ್ಮ
ನೀ ಇದ್ರೆ ನಮಗೆ ವೈಭೋಗ.

ಯಾರು ಆದರೂ ಹೆತ್ತ ತಾಯಂತೆ ಆದಾರೆ[2]
ಸಾವಿರ ಸೌದೆ ಒಲೆಯಲ್ಲಿ ಉರಿದಾರೆ[3]
ದೀವಿಗೆಯಂತ ಬೆಳಕುಂಟೆ.

ಒಬ್ಬರಿರುವಾ ಮನೆಗೆ ಹಬ್ಬದಿರು ಮಲ್ಲೀಗೆ[4]
ಒಬ್ಬಳೇ ಹೂದು ಮುಡಿಲಾರೆ: ಮಲ್ಲಿಗೆ .
ಹಬ್ಬೀಲು ನನ್ನ ಕವರೀಗೆ.[5]

1. ಕಣ್ಣೀಗೆ = ಕಣ್ಣಿಗೆ. 2. ಆದಾರೆ = ಆಗುತ್ತಾರೆಯೇನು? 3. ಉರಿದಾರೆ = ಉರಿದರೆ. 4. ಮಲ್ಲೀಗೆ = ಮಲ್ಲಿಗೆ. 5. ಕವರೀಗೆ = ಕವರಿಗೆ

ತಾಯಿ ನನ್ನ ಹಡೆದವ್ವ ಜೀವೆಲ್ಲ[1] ನನ ಮೇಲ[2]
ಥಡಿ ಹಾಕೀ ರಾಯ ಹುದುರೀಗೆ[3]. ಸಂಗಾಟ[4]
ಅಳ್ಳ ಕೆಳ್ಳುವರಸ[5] ಏಸೂಕು.

ಎಂಟೆಂಟು ದಿವಸಕ್ಕೆ ನಂತೆ ಅಪ್ಪನ ಮನೆ
ಜಂತಿನ ಚೀಡ ಕಿಂದಂಗಿ ಪಾವಃತಿ
ಸಂತೋಷ್ಟ ಕೀಲ್ರಿ ತವರೂರು.

ತಾವರೆಯ ಗಿಡ ಹುಟ್ಟಿ ದೇವರಿಗೆ ನೆರಳಾದೊ[6]
ನಾ ಹುಟ್ಟಿ ಮನೆಗೆ ಎರವಾದೆ. ಹಡೆದಮ್ಮ
ನೀ ಕೊಟ್ಟ ಮನೆಗೆ ನೆರಳಾದೆ.

ಬೇಸಗೆ ದಿವಸಕೆ ಬೇವಿನ ಮರ ತಂಪು
ಹೇಮವತಿ ಎಂಬ ನದಿ ತಂಪು. ಹಡೆದಮ್ಮ
ನೀ ತಂಪು ನನ್ನ ತವರಿಗೆ.

---

[1] ಜೀವವೆಲ್ಲ. [2] ಮೇಲ = ಮೇಲೆ. [3] ಹುದರಿಗೆ. [4] ಸಂಗಟ = ಜೊತೆ.
[5] ಕೆಳ್ಳುಬಾಕು ಅರಸ. [6] ನೆರಳಾದವು.

ಅನುಗಾಲ	Always
ಎರವು	Trouble
ಐನೂರು	500
ಐಭೋಗ	Five times enjoyment
ಕಳಿತ	Ripe
ಕೊಯು	Pluck
ಕಪ್ಪು	Black colour
ತಾವರೆ	Lotus
ತುಪ್ಪ	Clarified butter
ಜೀನು	Saddle
ನೆರಳು	Shadow
ದೀವಿಗೆ	Lamp
ಬಾನು	Sky

ಬಾಳೆ ಗೊನೆ	Banana clump
ಬೆಣ್ಣೆ	Butter
ಬೇಗೆ	Heat
ಬೇವಿನ ಮರ	Neem tree
ಮುಡಿ	To Wear on hair
ಮರಳು	Sand
ರಸ ಬಾಳೆ	One kind of banana (The best)
ಸಾವಿರ	Thousand
ಸಾಸಿವೆ	Mustard seeds.
ಸೆರಗು	End (falling on the shoulder) of saree.
ಸೌದೆ	Firewood

ಸಂಪಿಗೆ ಅರಳ್ಯಾವೆ ಸಂಪಾದಕ ಕ.ರಾ. ಕೃಷ್ಣಸ್ವಾಮಿ

ಪುಟ 136.

"ಭಾಗ್ಯವಂತರಾಗಲಿ ನಮ್ಮವರು"

ಚಿಕ್ಕ ಮಡದಿ ಎಂದು ಹೆಗಲ ಮೇಲೇರಿಸಿಕೊಂಡೆ
ತಂಗಿ ಮುಂಗೈಲ ಹಿಡಕೊಂಡೆ। ನಡು ಹಳ್ಳೀಲಿ
ಬಿಡತೀನಿ ತಂಗೆ ಸಡಿಯಿಂದ॥

ಮೂಗುತ್ತಿ ಮುರಿದರೆ ಮುರಿದು ಮಾಡಿಸಬಹುದು
ಮಡದಿ ಹೋದಾರೆ ತರಬಹುದು। ಅಣ್ಣಯ್ಯ
ಒಡಹುಟ್ಟಿದವರೆಲ್ಲಿಂದ[1] ತರುತೀಯ॥

ಅತ್ತಿಗೆಯ ಮಾತ ಕೇಳ್ಳಿ ನಾದುನಿ ಕೆಂಗ್ಯಾಳೆ[2]
ಕೆಂಪನೆ ಕಣ್ಣಿಂದು ಸಿಡುಕ್ಯಾಳು[3]। ನಾದುನಿ
ತೌರಹೋಗ ರಾಗ ತೆಗೆದಾಳು[4]॥

1 ಒಡಹುಟ್ಟಿದವರನ್ನು ಎಲ್ಲಿಂದ. 2. ಕೆಂಗಿದ್ದಾಳೆ.
3. ಸಿಡುಕುತ್ತಾಳೆ. 4. ತೆಗೆದಳು

భర్త్రువు[1] బెళ్లియాలి[2] భూరి వీరాగలి
భాగ్యవంతరాగలి నమ్మవరు। అణ్ణయ్య
నమ్మ అక్కిగె ముత్తైదెయాగి బదుకలి॥

1 భర్త్రువు.
2. బెళ్లియలి.

ಅತ್ತಿಗೆ	(Sister-in-law) Brother's wife
ಒಡಹುಟ್ಟಿದವರು	Born in a family ie., brothers and Sisters.
ನಾದಿನಿ	Husband's sister. (Sister-in-law).
ಭತ್ತ	Paddy
ಭಾಗ್ಯವಂತೆ	Fortunate & prosperous.
ಭಾರಿ	Big, great.
ಮಡದಿ	Wife
ಮೂಗುತಿ	Nose ring
ಸಿಡುಕು	Irritable
ಸಂಪಿಗೆ	Champak flower.
ಅರಳು	To bloom.
ಕೆರಳು	To get angry
ರಾಗ	Musical note (colloquially: weep)

ವಚನಗಳು

1. ಆಡಬಾರದ ಬಯಲು, ನೋಡಬಾರದ ಬಯಲು,
ನುಡಿಯಬಾರದ ಬಯಲು, ಹಿಡಿಯಬಾರದ ಬಯಲು
ಈ ಒಡಲಿಲ್ಲದ ಬಯಲೊಳಗೆ ಅಡಗಿದ[1] ಭೇದವ
ಈ ಲೋಕದ ಜಡರೆತ್ತ ಬಲ್ಲರೈ[2] ರಾಮನಾಥಾ.

2 ಉರಿದ ಹೊಳೆಯಲೊಬ್ಬ ಕಳ್ಳನೆಯ ಹೊಂಬಿದ. ಇರುಳೆಲ್ಲಾ
ನಡೆದನಾ[3]. ಸುಂಕಕ್ಕಂಜಿ. ಕಳ್ಳನೆ ಎಲ್ಲಾ ಹೋಗಿ ಬರಂತಾ
ಹೋಗಿ ಬೆಳಗಾಯಿತ್ತು[4]. ಅಳಿಮನದವನ ಭಕ್ತಿ
ಇಂತಾಯಿತ್ತು ರಾಮನಾಥಾ. ದೇವರ ದಾಸಿಮಯ್ಯ. 10ನೆ ಶತಮಾನ?

1 ಅಡಗಿದ = ಅಡಗಿರುವ. ಇದ = ಇರುವ
2 ಬಲ್ಲರೈ = ಬಲ್ಲರು
3 ನಡೆದನಾ = ನಡೆದನು
4 ಬೆಳಗಾಯಿತ್ತು = ಬೆಳಗಾಯಿತು. ಇತ್ತು = ಇತು.

3. ಶಿಲೆಯೊಳಗಣ[1] ಪಾವಕನಂತೆ ಉದಕದೊಳಗಣ
ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ
ಶಬ್ದದೊಳಗಣ ನಿಶ್ಶಬ್ದದಂತೆ ಗುಹೇಶ್ವರಾ
ನಿಮ್ಮ ಶರಣ ಸಂಬಂಧ.

4. ನಿಮ್ಮ ತೇಜವ ನೋಡಲೆಂದು[2] ಹೆರಸಾರಿ
ನೋಡುತ್ತಿರಲು ಶತಕೋಟಿ ಸೂರ್ಯರು ಮೂಡಿದಂತೆ
ಇದ್ದುದಯ್ಯಾ. ಮಿಂಚಿನ ಬಳ್ಳಿಯ ಸಂಚವ ಕಂಡೊಡೆ
ಎನಗಿದು[3] ಸೋಜಿಗವಾಯಿತ್ತು. ಗುಹೇಶ್ವರಾ ನೀನು
ಜ್ಯೋತಿರ್ಲಿಂಗವಾದಡೆ ಉಪಮಿಸಿ ನೋಡಬಲ್ಲವರಿಲ್ಲಯ್ಯಾ.

[1] ಶಿಲೆಯ + ಒಳಗಣ. ಒಳಗಣ = ಒಳಗಿನ.

[2] ನೋಡಲೆಂದು = ನೋಡಲಿಕ್ಕೆಂದು

[3] ಎನಗೆ + ಇದು = ನನಗಿದು = ನನಗೆ ಇದು.

5. ನಾ ದೇವನಲ್ಲದೆ ನೀ ದೇವನಾದರೆ ಎನ್ನನೇಕೆ ಸಲಹೆ?
ಆರೈದು ಒಂದು ಕುಡಿಕೆ ನೀರನೆರೆವೆ.[1] ಹಸಿದಾಗ
ಒಂದು ತುತ್ತು ಓಗರವನಿಕ್ಕುವೆ. ನಾ ದೇವ ಕಾಣಾ ಗುಹೇಶ್ವರಾ.

6. ಬೆಟ್ಟಕ್ಕೆ ಚಳಿಯಾದಡೆ[2] ಏನು ಹೊದ್ದಿಸುವರಯ್ಯ?
ಬಯಲು ಬತ್ತಲೆ ನಿಂದಡೆ ಏನನುಡಿಸುವರಯ್ಯ? ಭಕ್ತನು
ಭವಿಯಾದಡೆ ಅದೇನನುಪಮಿಸುವೆನಯ್ಯ[3] ಗುಹೇಶ್ವರಾ.

7. ಬೆಳಗುವ ಕನ್ನಡಿಯಂತು ನುಂಗಿ ಬೆಳಗ ನಾನೊಬ್ಬನೇ ಆದೆ.
ಕಾಂಬ[4] ಕನ್ನಡಿಯ ಕಳೆದುಳಿದು ನಿನಗಾನು
ಗುರಿಯಾದೆ ಗುಹೇಶ್ವರಾ. ಅಲ್ಲಮಪ್ರಭು. 12ನೆ ಶತಮಾನ

1. ನೀರನು + ಎರೆವೆ(ನು) = ನೀರನೆರೆವೆ.

2. ಚಳಿಯು + ಆದಡೆ = ಚಳಿಯಾದಡೆ. ಆದಡೆ = ಆದರೆ

3. ಅದು + ಏನನು + ಉಪಮಿಸುವೆನು + ಅಯ್ಯ

4 ಕಾಂಬ = ಕಾಣುವ

೮. ಕಾಯಕ್ಕೆ ನೆರಳಾಗಿ ಕಾಡಿತ್ತು ಮಾಯೆ. ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ. ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ. ನೆನಹಿಂಗೆ[1] ಅರಿವಾಗಿ ಕಾಡಿತ್ತು ಮಾಯೆ. ಚೆನ್ನಮಲ್ಲಿಕಾರ್ಜುನ ನೀನೊಡ್ಡಿದ ಮಾಯೆಯನಾರು[2] ಗೆಲುವರು.

9. ಬಂಜೆ ಬೇನೆಯನರಿಯಳು, ಬಲದಾಯಿ[3] ಮುದ್ದ ಬಲ್ಲಳೆ? ನೊಂದನೋವ ನೋಯದವರೆತ್ತ ಬಲ್ಲರು! ಚೆನ್ನಮಲ್ಲಿಕಾರ್ಜುನನಿರಿದ ಅಲಗು ಒಡಲಲ್ಲಿ ಮುರಿದು ಹೊರಳುವವಳ ನೀವೆತ್ತ ಬಲ್ಲಿರೆ ಎಲೆ ತಾಯಿಗಳಿರಾ.

10. ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟ್ಟ ದೇವಾಂಗವನುಟ್ಟು ಪುರುಷ ಬಾರಾ! ನಿನ್ನ ಬರ-

[1] ನೆನಹಿಂಗೆ = ನೆನಹಿಗೆ.
[2] ಮಾಯೆಯನು + ಆರು. ಆರು = ಯಾರು
[3] ಬಲ + ತಾಯಿ = ಬಲದಾಯಿ

ಎನ್ನಸುವಿನ[1] ಬರವ ಬಾರಯ್ಯ! ಚೆನ್ನಮಲ್ಲಿಕಾರ್ಜುನನ
ಬಂದಾನೆಂದು[2] ಬಟ್ಟೆಗಳ ನೋಡಿ ಬಾಯಾರುತಿಹೆನು.[3]

ಅಕ್ಕ ಮಹಾದೇವಿ. 12ನೆ ಶತಮಾನ.

11. ಒಲೆ ಹತ್ತಿ ಉರಿದಡೆ ನಿಲ್ಲಬಹುದಲ್ಲದೆ, ಧರೆ ಹತ್ತಿ
ಉರಿದಡೆ ನಿಲ್ಲಬಹುದೆ? ಏರಿ ನೀರುಂಬಡೆ, ಬೇಲಿ
ಕೆಯ್ಯ ಮೇದಡೆ, ನಾರಿ ತನ್ನ ಮನೆಯಲ್ಲಿ ಕಳುವಡೆ[4]
ತಾಯ ಮೊಲೆವಾಲು[5] ನಂಜಾಗಿ ಕೊಲುವಡೆ, ಇನ್ನಾರಿಗೆ
ದೂರುವೆ ಕೂಡಲಸಂಗಮದೇವಾ.

12. ಬೆಲ್ಲವ ತಿಂದ ಕೋಡಗನಂತೆ ಸಿಹಿಯ ನೆನಸದಿರಾ
ಮನವೇ. ಕಬ್ಬು ತಿಂದ ನರಿಯಂತೆ ಹಿಂದಕ್ಕೆಳಸದಿರಾ

1. ಎನ್ನ (ನನ್ನ) + ಅಸುವಿನ.
2. ಬಂದಾನು + ಎಂದು. ಬಂದಾನು = ಬರಬಹುದು.
3. ಬಾಯಿ + ಆರುತ + ಇಹೆನು. ಇಹೆನು = ಇದ್ದೇನೆ.
4. ಕಳುವಡೆ = ಕದ್ದರೆ.
5. ಮೊಲೆಯ + ಹಾಲು

ಮನವೇ. ಗಗನವನಡರಿದ ಕಾಗೆಯಂತೆ ದೆಸೆದೆಸೆಗೆ
ಹಂಬಲಿಸದಿರಾ ಮನವೇ. ಕೂಡಲ ಸಂಗನ ಶರಣರ
ಕಂಡು ಲಿಂಗವೆಂದು ನಂಬು ಮನವೇ.

13. ಹಾವಿನ ಬಾಯ ಕಪ್ಪೆ ಹಾರುವ ನೊಣಕ್ಕೆ ಆಸೆ
ಮಾಡುವಂತೆ, ಶೂಲವನೇರುವ ಕಳ್ಳ ಹಾಲು ತುಪ್ಪವ
ಹಿಡಿದು ಮೇಲೇಸು ಕಾಲ ಬದುಕುವನೋ! ಕಿಡಿಹೊಡಳ
ನೆಚ್ಚಿ ಕಡು ಹುಸಿಯನೆ ಹುಸಿದು ಒಡಲ ಹೊರೆವರ
ಕೂಡಲ ಸಂಗಮ ದೇವಯ್ಯನೊಲ್ಲ ಕಾಣಿರಣ್ಣಾ.

14. ಉಳ್ಳವರು ಶಿವಾಲಯವ ಮಾಡುವರು. ನಾನೇನ ಮಾಡುವೆ
ಬಡವನಯ್ಯಾ! ಎನ್ನ ಕಾಲೇ ಕಂಬ, ದೇಹವೇ ದೇಗುಲ.
ಶಿರವೇ ಹೊನ್ನ ಕಳಸವಯ್ಯಾ. ಕೂಡಲ ಸಂಗಮ ದೇವಯ್ಯಾ
ಕೇಳಯ್ಯಾ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ.

15. ಹಾವಿನ ಹೆಡೆಗಳ ಕೊಂಡು[1] ಕಜ್ಜಿಯ ತುರಿಸಿಕೊಂಬಂತೆ,[2]
ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ,
ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಾಲನಾಡುವಂತೆ.
ಕೂಡಲಸಂಗನ ಶರಣರೊಡನೆ ಮರೆದು ಸರಸವಾಡಿದರೆ
ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ
ಬಿದ್ದಂತೆ.

ಬಸವಣ್ಣ. 12 ನೆ ಶತಮಾನ.

1 ಕೊಂಡು = ತೆಗೆದು ಕೊಂಡು.

2 ತುರಿಸಿಕೊಂಬ + ಅಂತೆ = ತುರಿಸಿಕೊಳ್ಳುವಂತೆ.

ಅಡರು	Climb
ಅರಿವು	Awareness
ಅಲಗು	blade
ಅಸು	Life
ಅಳುಮನ	Fickle mind
ಅಳಿವು	Destruction
ಇರುಳು	Darkness, night
ಇಂತೆ	Like this
ಕಾಪಾಡು	Protect
ಉದಕ	Water
ಉಡಿಸು	To wrap
ಉಪಮೆ	Metaphor
ಉಂಬು	Eat
ಉಯ್ಯಾಲವಾಡು	To Swing
ಉಳ್ಳವರು	The rich
ಎತ್ತ	Where
ಎನ್ನ	My
ಎರೆ	Pour

ಏರಿ	Bund
ಏಸು	How long
ಒಡಲು	Body
ಒಡಲ ಹೊರೆ	Make a living
ಒಡ್ಡು	Spread
ಒಲ್ಲ	Does not like
ಓಗರ	Rice
ಕಪ್ಪೆ	Frog
ಕಳವೆ	Stolen goods
ಕಳು	Steal
ಕಳಸ	Cupola
ಕಂಬ	Pillar
ಕಾಗೆ	Crow
ಕಡು	Harsh
ಕಾಡು	Trouble
ಕಾಣಾ	Intimate form of address
ಕಾಯ	Body
ಕಂಡೊಡೆ	When I saw
ಕುಡಿಕೆ	Small pot

ಕೆನ್ನೆ	Cheek
ಕೆಡೆವೊಡಲು	Body subject to decay.
ಕೊಂಬು	Crop
ಕೊಳ್ಳಿ	Torch
ಕೋಡಗ	Monkey.
ಗಗನ	Sky
ಗುಹೇಶ್ವರ	Lord of the caves
ಗೋಣಿ	Sack cloth, canvas,
ಜಂಗಮ	The ever moving
ಜಡರು	Dull wits
ಜ್ಯೋತಿರ್ಲಿಂಗ	Lingam of lights.
ತುತ್ತು	Morsel
ತುರಿಸಿಕೊ	To scratch
ತೇಜ	Brightness

ದೂರು	Complain
ದೇಗುಲ	Temple
ದೇವಾಂಗ	Silk
ಧರೆ	Earth
ನರಿ	Fox, jackal
ನಾರಿ	Woman
ನಿಶ್ಶಬ್ದ	Silence
ನುಂಗು	Swallow
ನೊಣ	Fly
ನೊಂದ	Suffered
ನಂಜು	Poison
ಪಾವಕ	Fire
ಬತ್ತಲೆ	Naked
ಬಯಲು	Field
ಮಲತಾಯಿ	Step mother
ಬಟ್ಟೆ	Path
ಬರೆ	Arrival

ಬಾಯಾರು	To be thirsty
ಬಾರಾ	Come
ಬೇನೆ	Labour pain
ಭವಿ	One who repudiates God.
ಬಂಜೆ	Sterile woman
ಮಡಿಲು	Cloth around front of waist (a woman's front part of saree)
ಮಡು	Pond
ಮಂಡೆ	Head
ಮಾಂತು	Illusion
ಮಿಂದು	Having taken bath
ಮೂಡು	Rise
ಮೊಲೆ ಹಾಲು	Breast milk.
ವೃಕ್ಷ	Tree

ಶತಕೋಟಿ	Hundred crores
ಶಿರ	Head
ಶಿವಾಲಯ	Siva's temple
ಶೂಲ	Gallows
ಸರಸ	Light play
ಸಲಹು	Protect
ಸ್ಥಾವರ	Stationary
ಸಿಕ್ಕು	Gnarls of one's hair.
ಸುಂಕ	Tax
ಸುಣ್ಣದ ಕಲ್ಲು	Lime stone
ಸೋಜಿಗ	Wonder
ಹತ್ತು	Catch fire
ಹರಿ	Tear
ಹುಲಿ	Tiger
ಹುಸಿ	Fib, falsehood

ಹುಸಿದು	Having lied
ಹಿಂದಕ್ಕೆಳಸು	Desire for the past.
ಹೆಡೆ	Hood (of a serpent)
ಹೆರಸಾರು	Go back
ಹೊನ್ನು	Gold
ಹೊದ್ದಿಸು	To cover
ಹೊಂಬುಡಿಗೆ	Cloth of gold
ಹಂಬಲಿಸು	To pine for

VACANAS
A Literal Translation

1. How can the dull wits of this world comprehend the differences hidden in the bodiless space with which you cannot play, which you cannot see, about which you cannot speak and which you cannot grasp?

2. A man crammed a torn bag with stolen goods and walked all through the night in fear of the tax collector. The stolen goods fell through and only the bag remained. Thus is the devotion of the fickle-minded O Lord.

3. Like fire in flint, reflection in water, tree in the seed and silence in sound is the relationship between you and your devotees, O Lord of the Caves.

4. I went back to see your splendor. It appeared as if millions of suns had arisen. When I saw the ganglion of lightening-creepers I was surprised. O Lord of the Caves, if you are Brightness no one can find an adequate metaphor (for you).

5. If you, not I, are God, why don't you protect me? I protect you by bathing you and by giving you a morsel of rice when you are hungry. I am God O Lord of the Caves.

6. If the mountain feels cold what do you wrap it with? If space stands naked what do you clothe it with? If the devotee backslides what image can I find for him O Lord of the Caves?

7. Light swallowed darkness and I remained alone inside. The visible darkness having gone I became your target O Lord of the Caves.

8. Illusion haunted the body as shadow, life as mind, mind as memory, and memory as consciousness. Lord no one can triumph over the Illusion that you have spread.

9. The barren woman does not know labor pains. How does the step-mother know affection for the child? How can those who haven't experienced pain know the pain of those who have experienced it? How can you know me O mothers, me whose body has been pierced by the Lord's sword, me in whose body it is broken and me who is rolling over in pain?

10. Wearing turmeric after the bath, wearing cloth of gold and silk [illegible] clothes, come primal Man. Your arrival is the arrival of my life. I am thirsting, looking at the paths, that the Lord may come.

11. Fire in the fireplace can be extinguished, but when the world goes up in flames can it be extinguished? If the bank of the tank drinks up the water, if the fences grases in field, if the housewife steals in the house, and if mother's milk turns into gall and kills- to whom can I complain, Lord of the Meeting Rivers?

12. Like a monkey that has eaten jaggery, mind, don't remember sweetness. Like a fox that has tasted sugarcane dont desire back. Like a crow which has ascended the skies don't pine for different directions. Believe that the devotees of the Lord are the Lord.

13. A fly in the mouth of a snake felt hungry and desired for the flying fly. How much longer can a thief who has to ascend the gallows live by drinking milk and ghee? The Lord of the Meeting Rivers does'nt like those who trust the body that is subject to decay and who live by speaking falsehood.

14. The rich build temples for Siva. What can I, the Poor. do? My legs are the columns, my body is the temple and my head is the golden cupola. Lord of the Meeting Rivers, listen, the standing decay and the moving will stay.

15. To play with the devotees of the Lord of the Meeting Rivers is like scartching one's chins with the hood of a snake, like untying the gnarls in one's hair with a burning torch, like swinging from the moustaches of a tiger, and like falling into a lake with lime tied in one's clothes.

ಗಾದೆಗಳು

1. ಅಕ್ಕ ಸತ್ತರೆ ಅಮಾಸೆ ನಿಲ್ಲದು.	Time and tide wait for no one.
2. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ.	Every dog has 'its day.
3. ಓದದವನಿಗೆ ಓಡೆ ಕಾಣಾಲಲ್ಲ.	All work and no play makes Jack a dull boy.
4. ಕೈನ್ನಆಯೊಳ್ಳಗಿನ ಗಂಟಿ-ಗಿಂತ ಕಾಡೊಳ್ಳಗಿನ ಗಂಟೆ ಲೇಸು.	A bird in the hand is worth two in the bush.
5. ಕಷ್ಟಕ್ಕೆದವನೇ ನೆಂಟ.	A friend in need is a friend indeed.

6. ಚಿಂತೆ ಮಾಡಿದರೆ ಸಂತೆ ಸಾಗೀತೇ?	A pound of care will not pay an ounce of debt.
7. ದುಡ್ಡೇ ದೊಡ್ಡಪ್ಪ	Money makes the mare to go.
8. ಬಂಗ್ತ್ಯಯವರ ಬಡಿವಾರ ಬಹಳ.	An empty vessel makes much noise.
9. ಮಾಡಿದ್ದುಣ್ಣೋ ಮಹರಾಯ.	As you sow so you reap.
10. ಹಸಿದವಂಗೆ ಹಳಸಿದ್ದೇ ಪಾಯಸ.	Hunger makes hard beans soft.
11. ಹುಟ್ಟುಗುಣಾ ಸುಟ್ಟರೂ ಹೋಗದು.	What is bred in the bone will never be out of the flesh.

12. ಹೆತ್ತವರಿಗೆ ಹೆಗ್ಗಣ Every potter
ಮುದ್ದು. praises his pot.

ಅಮಾಸೆ	New Moon Day.
ಉಣ್ಣು	Eat
ಓಣಿ	Lane
ಗಾದೆ	Proverb
ಗಂಟು	Money (a big amount)
ದಂಟು	Green vegetable like Spinach.
ದೊಡ್ಡಪ್ಪ	Father's elder brother.
ಬಿಡಿಹಾರ	Fuss
ಬರಿಗೈ	Empty hand
ಪಾವನ	Sacred
ಮುದ್ದು	Affectionate
ಲೇಸು	Better
ಸಾಗು	Proceed
ಸುಟ್ಟ	burnt

ಸೊಸೆ	Daughter-in-law
ಹಳಸು	(Food) to go stale
ಹುಟ್ಟುಗುಣ	Inborn qualities
ಹೆಗ್ಗಣ	Bandicoot [Big rat]
ಹೆತ್ತವರು	Parents
ಹೋಗದು	Won't go.